# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಭಾಗ್ಯಲಕ್ಷ್ಮಿ ಯೋಜನೆಯ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸುವ ಬಗ್ಗೆ.

**ಓದಲಾಗಿದೆ:**

1. ಆದೇಶ ಸಂಖ್ಯೆ:ಮಮಇ 99 ಮಮಅ 2006, ದಿನಾಂಕ:17.10.2006
2. ಆದೇಶ ಸಂಖ್ಯೆ:ಮಮಇ 99 ಮಮಅ 2006(ಭಾಗ–2), ದಿನಾಂಕ:19.06.2007
3. ಆದೇಶ ಸಂಖ್ಯೆ:ಮಮಇ 152 ಮಮಅ 2008, ದಿನಾಂಕ:14.08.2008
4. ಆದೇಶ ಸಂಖ್ಯೆ:ಮಮಇ 97 ಮಮಅ 2011, ದಿನಾಂಕ:17.09.2011
5. ಆದೇಶ ಸಂಖ್ಯೆ:ಮಮಇ 57 ಮಮಅ 2013, ದಿನಾಂಕ:19.03.2014
6. ಆದೇಶ ಸಂಖ್ಯೆ:ಮಮಇ 181 ಮಮಅ 2013, ದಿನಾಂಕ:09.09.2014
7. ಆದೇಶ ಸಂಖ್ಯೆ:ಮಮಇ 28 ಮಮಅ 2014, ದಿನಾಂಕ:09.07.2014
8. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರಗಳ ಸಂ:ಮಮಅಇ/ಮಕ/ಭಾಯೋ–10/2014–15 ದಿನಾಂಕ:27.06.2014, 22.09.2014, 16.10.2014 ಮತ್ತು 20.10.2014.

**ಪ್ರಸ್ತಾವನೆ:**

2001ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಲಿಂಗಾನುಪಾತವು 1000/964 ಆಗಿದ್ದು, ಇದು 2011ರ ಜನಗಣತಿಯ ಪ್ರಕಾರ 1000/973 ಆಗಿರುತ್ತದೆ. ಈ ಅನುಪಾತವು ರಾಷ್ಟ್ರದ ಸರಾಸರಿ ಲಿಂಗಾನುಪಾತಕ್ಕಿಂತ ಉತ್ತಮವಾಗಿದ್ದರೂ ಸಹ, ಪ್ರಸ್ತುತ ಹೆಣ್ಣು ಮಗುವಿನ ಸ್ಥಾನಮಾನಕ್ಕೆ ಹೆಚ್ಚಿನ ಮೌಲ್ಯ ಕಲ್ಪಿಸುವ ಬಗ್ಗೆ ಬಲವಾದ ವಾದವಿರುತ್ತದೆ. ಗಂಡು ಸಂತತಿಯ ಉತ್ತೇಜನಕ್ಕೆ ಅನೇಕ ಸಾಮಾಜಿಕ ಆರ್ಥಿಕ ಕಾರಣಗಳಿದ್ದರೂ, ಇದು ಹೆಣ್ಣು ಮಕ್ಕಳ ಆರೋಗ್ಯ, ಶಿಕ್ಷಣ, ಪೋಷಣೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ಅಡಚಣೆಯಾಗಿದೆ.

ರಾಜ್ಯ ಸರ್ಕಾರಕ್ಕೆ ಹೆಣ್ಣು ಮಗುವಿನ ಬಗ್ಗೆ ಇರುವ ಕಾಳಜಿ ವ್ಯಕ್ತಪಡಿಸಲು ಹಾಗೂ ಹೆಣ್ಣು ಮಗುವಿನ ಬಗ್ಗೆ ಸಮಾಜದಲ್ಲಿರುವ ಧೋರಣೆಯನ್ನು ಬದಲಿಸಲು 2006–07ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹೆಣ್ಣು ಮಕ್ಕಳ ರಕ್ಷಣೆಗೆ "ಭಾಗ್ಯಲಕ್ಷ್ಮಿ" ಎಂಬ ಹೊಸ ಕಲ್ಯಾಣ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಯೋಜನೆಯಡಿ ಮಾರ್ಚ್–2014ರ ಅಂತ್ಯದವರೆಗೆ 18,60,322 ಫಲಾನುಭವಿಗಳಿಗೆ ರೂ.2944.57 ಕೋಟಿಗಳ ವೆಚ್ಚದಲ್ಲಿ ಬಾಂಡ್‌ಗಳನ್ನು ವಿತರಿಸಲಾಗಿದೆ. ಭಾಗ್ಯಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕೆಲವು ಆಡಳಿತಾತ್ಮಕ ತೊಂದರೆಗಳ ಜೊತೆಗೆ ಮಕ್ಕಳ ನೋಂದಣಿ, ತಂದೆ–ತಾಯಿಯರ ಹೆಸರು ನಮೂದು, ಬಿ.ಪಿ.ಎಲ್. ಕಾರ್ಡ್, ಕಡ್ಡಾಯ ವಿವಾಹ ನೋಂದಣಿ, ಆದಾಯ ಪ್ರಮಾಣ ಪತ್ರ, ವಿದ್ಯಾರ್ಹತೆ, ಅಂಗವಿಕಲರಿಗೆ ವಿದ್ಯಾರ್ಹತೆಯ ಮಿತಿ ಇತ್ಯಾದಿ ಸಮಸ್ಯೆಗಳು ಆಗಿಂದಾಗ್ಗೆ ಉದ್ಭವಿಸುತ್ತಿರುತ್ತವೆ. ಆದುದರಿಂದ, ಪ್ರಸ್ತುತ ಚಾಲ್ತಿಯಲ್ಲಿರುವ ಭಾಗ್ಯಲಕ್ಷ್ಮಿ ಯೋಜನೆಯ ನಿಯಮಾವಳಿಗಳನ್ನು ಸರಳೀಕರಣಗೊಳಿಸಿ, ಮಾರ್ಪಾಡು ಆದೇಶ ಹೊರಡಿಸುವಂತೆ ಕೋರಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮೇಲೆ ಓದಲಾದ (8) ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅಲ್ಲದೆ, ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನದಲ್ಲಿ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 26ನೇ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು

2..

ಮಾಡಿರುತ್ತಾರೆ ಹಾಗೂ ಭಾಗ್ಯಲಕ್ಷ್ಮಿ ಯೋಜನೆಯಡಿ ನೋಂದಣಿ ಮಾಡಲು ಪೋಷಕರ ವಿವಾಹ ನೋಂದಣಿ ಪ್ರಮಾಣ ಪತ್ರ ಕಡ್ಡಾಯ ಮಾಡಿರುವುದನ್ನು ಕೈಬಿಡುವಂತೆ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಶಿಫಾರಸ್ಸು ಮಾಡಿರುತ್ತದೆ.

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆಯನ್ನು ಹಾಗೂ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಯೋಜನೆಯ ಅನುಷ್ಠಾನದಲ್ಲಿ ಕಂಡು ಬಂದಿರುವ ಸಾಧಕ-ಬಾಧಕಗಳನ್ನು ಗಮನದಲ್ಲಿಟ್ಟುಕೊಂಡು, ಭಾಗ್ಯಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಾವಳಿಗಳಿಗೆ ಕೆಲವೊಂದು ಬದಲಾವಣೆಗಳನ್ನು ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನದ ಬಗೆಗಿನ ಮೇಲೆ ಓದಲಾದ (1) ರಿಂದ (7)ರವರೆಗಿನ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿ, ಪರಿಷ್ಕೃತ ಕ್ರೋಢೀಕರಿಸಿದ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

## ಆದೇಶ ಸಂಖ್ಯೆ:ಮಮಇ 145 ಮಮಅ 2014, ಬೆಂಗಳೂರು, ದಿನಾಂಕ:06.03.2015

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, 2006-07ನೇ ಸಾಲಿನಿಂದ ಚಾಲ್ತಿಯಲ್ಲಿರುವ ಭಾಗ್ಯಲಕ್ಷ್ಮಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಮೇಲೆ ಓದಲಾದ (1) ರಿಂದ (7)ರ ಸರ್ಕಾರಿ ಆದೇಶಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ, ಯೋಜನೆಯ ನಿಯಮಾವಳಿಗಳನ್ನು ಸರಳೀಕರಣಗೊಳಿಸಿ, ಸರ್ಕಾರವು ಈ ಕೆಳಕಂಡಂತೆ ಕ್ರೋಢೀಕರಿಸಿದ ಪರಿಷ್ಕೃತ ಆದೇಶವನ್ನು ಹೊರಡಿಸಿ ಆದೇಶಿಸಿದೆ.

### I. ಯೋಜನೆಯ ಮುಖ್ಯ ಉದ್ದೇಶಗಳು:-

ಹೆಣ್ಣು ಮಗುವನ್ನು ಆರ್ಥಿಕ ನೆರವಿನ ಮೂಲಕ ಸಬಲೀಕರಣಗೊಳಿಸಿ ಸ್ವಾವಲಂಬಿಯನ್ನಾಗಿ ಮಾಡುವುದು. ಈ ಯೋಜನೆಯ ಮುಖ್ಯ ಉದ್ದೇಶ. ಮಗು ಜನಿಸಿದ ಆರು ತಿಂಗಳೊಳಗೆ ಅರ್ಜಿಯನ್ನು ಪಡೆದು ಈ ನೆರವನ್ನು ಮಗುವಿನ ತಾಯಿ ಅಥವಾ ತಾಯಿ/ತಂದೆ ಇಲ್ಲದ ಪಕ್ಷದಲ್ಲಿ ಪೋಷಕರ ಹೆಸರಿನಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದಲ್ಲಿ ನೀಡಲಾಗುವುದು.

### II. ಯೋಜನೆ:-

1. ಭಾಗ್ಯಲಕ್ಷ್ಮಿ ಯೋಜನೆಯನ್ನು ಸರ್ಕಾರವು ಆಗಿಂದಾಗ್ಗೆ ತಿದ್ದುಪಡಿ ಮಾಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಹಾಗೂ ನಿಯಮಗಳು, 2000 ರಡಿ ಆಯ್ಕೆ ಮಾಡಿದ ಹಣಕಾಸು ಸಂಸ್ಥೆಯ ಸಹಭಾಗಿತ್ವದೊಡನೆ ಅನುಷ್ಠಾನಗೊಳಿಸಲಾಗುವುದು.
2. ಈ ಯೋಜನೆಯು ಪ್ರಸ್ತುತ ಚಾಲ್ತಿಯಲ್ಲಿದ್ದು, ಅವಶ್ಯಕತೆಗೆ ಅನುಗುಣವಾಗಿ ಯೋಜನೆಯನ್ನು ಪರಾಮರ್ಶೆ ಮಾಡಿ ಯಾವುದಾದರೂ ಬದಲಾವಣೆಗಳು ಅಗತ್ಯವಿರುತ್ತದೆಯೇ ಎಂಬುದನ್ನು ಪರಿಶೀಲಿಸಿ ಯೋಜನೆಯನ್ನು ಮುಂದುವರೆಸುವ ಬಗ್ಗೆ ನಿರ್ಧರಿಸಲಾಗುವುದು.
3. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಇಬ್ಬರು ಹೆಣ್ಣು ಮಕ್ಕಳಿಗೆ ದಿನಾಂಕ:31.03.2006 ರಿಂದ ದಿನಾಂಕ:31.07.2008 ರವರೆಗೆ ಜನಿಸಿದ ಹೆಣ್ಣು ಮಕ್ಕಳಿಗೆ ರೂ.10,000/- ಹಾಗೂ ದಿನಾಂಕ: 01.08.2008ರ ನಂತರ ಜನಿಸಿದ ಮೊದಲನೇ ಹೆಣ್ಣು ಮಗುವಿಗೆ ರೂ.19,300/- ಹಾಗೂ ಎರಡನೇ ಹೆಣ್ಣು ಮಗುವಿಗೆ ರೂ.18,350/-ರಂತೆ ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಠೇವಣಿ ಇಡಲಾಗುವುದು. ಪಾಲುದಾರ ಹಣಕಾಸು ಸಂಸ್ಥೆಯು ಹೆಣ್ಣು ಮಗುವಿನ ಹೆಸರಿನಲ್ಲಿ ಇಟ್ಟ ಠೇವಣಿ ಮೇಲಿನ ಆದಾಯವನ್ನು ಗರಿಷ್ಠಗೊಳಿಸಿ, ಠೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗೆ 18(ಹದಿನೆಂಟು)

3..



ವರ್ಷ ಪೂರ್ಣಗೊಂಡ ನಂತರ ದೊರಕಿಸಿಕೊಡುತ್ತದೆ. ಹೆಸರು ನೊಂದಾಯಿಸಲು ಮಗುವು ಜನಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಕಾಲಾವಕಾಶ ನೀಡಲಾಗುವುದು.

4. ದಿನಾಂಕ:01.04.2006 ರಿಂದ 31.07.2008 ರವರೆಗೆ ಜನಿಸಿ ಯೋಜನೆಯಡಿ ನೊಂದಣಿಯಾದ ಹಾಗೂ ದಿನಾಂಕ:01.08.2008ರ ನಂತರ ಜನಿಸಿ ಯೋಜನೆಯಡಿ ನೊಂದಣಿಯಾದ ಮಕ್ಕಳಿಗೆ ನೀಡಲಾಗುವ ಸೌಲಭ್ಯಗಳ ವಿವರ ಈ ಕೆಳಗಿನಂತಿದೆ:-

(ರೂ.ಗಳಲ್ಲಿ)

| ಕ್ರ.ಸಂ | ವಿಮಾ ಸ್ವರೂಪ | ದಿನಾಂಕ:01.04.2006 ರಿಂದ 31.07.2008ರವರೆಗೆ ಜನಿಸಿದ ಫಲಾನುಭವಿಗಳಿಗೆ ದೊರೆಯುವ ಮೊತ್ತ | | ದಿನಾಂಕ:01.08.2008 ರಿಂದ ಜನಿಸಿದ ಫಲಾನುಭವಿಗಳಿಗೆ ದೊರೆಯುವ ಮೊತ್ತ | |
|---|---|---|---|---|---|
| 1 | ಅಂದಾಜು ಪರಿಪಕ್ವ ಮೊತ್ತ | ಒಂದನೇ ಮಗು | ಎರಡನೇ ಮಗು | ಒಂದನೇ ಮಗು | ಎರಡನೇ ಮಗು |
| | | 34,751 | 40,619 | 1,00,052 | 1,00,097 |
| 2 | ವಿದ್ಯಾರ್ಥಿ ವೇತನ | 1 ರಿಂದ 3ನೇ ತರಗತಿ 300.00<br>4ನೇ ತರಗತಿ 500.00<br>5ನೇ ತರಗತಿ 600.00<br>6ರಿಂದ 7ನೇ ತರಗತಿ 700.00<br>8ನೇ ತರಗತಿ 800.00<br>9ರಿಂದ 10ನೇ ತರಗತಿ 1000.00 | | ವಿದ್ಯಾರ್ಥಿ ವೇತನ ಸೌಲಭ್ಯವಿರುವುದಿಲ್ಲ. | |
| 3 | ಆರೋಗ್ಯವಿಮೆ | ಗರಿಷ್ಠ ವಾರ್ಷಿಕ ರೂ.25,000.00 | | ಆರೋಗ್ಯ ವಿಮೆ ಸೌಲಭ್ಯವಿರುವುದಿಲ್ಲ. | |
| 4 | ಗಳಿಸುವ ಪೋಷಕರು ಅಪಘಾತದಲ್ಲಿ ಪೂರ್ತಿ ಅಂಗವಿಕಲರಾದರೆ-2 ಕಣ್ಣು ಅಥವಾ 2 ಕಾಲು ಅಥವಾ 1 ಕಣ್ಣು ಮತ್ತು 1 ಕಾಲು ಅಂಗವಿಕಲವಾದಲ್ಲಿ | 75,000.00 | | 75,000.00 | |
| 5 | ಗಳಿಸುವ ಪೋಷಕರು ಅಪಘಾತ ದಲ್ಲಿ ಪಾರ್ಶ್ವ ಅಂಗವಿಕಲರಾದರೆ-1 ಕಣ್ಣು ಅಥವಾ 1 ಕಾಲು ಅಂಗವಿಕಲವಾದಲ್ಲಿ | 37,000.00 | | 37,000.00 | |
| 6 | ಗಳಿಸುವ ಪೋಷಕರು ಅಪಘಾತ ದಲ್ಲಿ ನಿಧನರಾದರೆ ವಿಮೆಯ ಸುರಕ್ಷತೆ | 1,00,000 | | 75,000.00 | |
| 7 | ವಿಮೆಯ ಸುರಕ್ಷತೆ (ಅಪಘಾತ ವನ್ನು ಬಿಟ್ಟು) ಸಹಜ/ಸ್ವಾಭಾವಿಕ ಸಾವು | 42,500.00 | | 30,000.00 | |
| ವಿಮಾದಾರ ತಂದೆ ಮರಣ ಹೊಂದಿ ಮರಣ ವಿಮೆಯನ್ನು ಪಡೆದಿದ್ದು, ಫಲಾನುಭವಿ ಮಗುವಿಗೆ 18ವರ್ಷ ಪೂರ್ಣಗೊಳ್ಳುವುದಕ್ಕಿಂತ ಮುಂಚಿತವಾಗಿ ತಾಯಿಯು ಮರಣ ಹೊಂದಿದ್ದಲ್ಲಿ ಇನ್ನೊಂದು ಬಾರಿ ಮರಣ ವಿಮೆಯನ್ನು ಪಡೆಯಬಹುದಾಗಿದೆ. | | | | | |

4...

5. ಯೋಜನೆಯನ್ನು ವಿವಿಧ ಸರ್ಕಾರಿ ಇಲಾಖೆಗಳ ಸಹಕಾರದೊಂದಿಗೆ ಅನುಷ್ಠಾನಗೊಳಿಸಲಾಗುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಯೋಜನೆಯ ಅನುಷ್ಠಾನಕ್ಕಾಗಿ ಅಳವಡಿಸುವ ಸಂಪೂರ್ಣ ಗಣಕೀಕೃತ ಆಡಳಿತ ವ್ಯವಸ್ಥೆಯನ್ನು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯ ಸಹಯೋಗದಿಂದ ಅನುಷ್ಠಾನಗೊಳಿಸುವುದು.
6. ಯೋಜನೆಯ ಅನುಷ್ಠಾನದ ಆಡಳಿತ ವೆಚ್ಚವನ್ನು ಪ್ರತ್ಯೇಕವಾಗಿ ಭರಿಸಲಾಗುವುದು.
7. ಫಲಾನುಭವಿಯ ತಂದೆ ತಾಯಿ, ಹೆಣ್ಣು ಮಗು ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುವುದನ್ನು ಖಚಿತಪಡಿಸಬೇಕು.
8. ಯಾವುದೇ ಹಣವು ಫಲಾನುಭವಿಗೆ ವಿತರಣೆಯಾಗದೆ ಇದ್ದಲ್ಲಿ ಬಡ್ಡಿ ಸಮೇತ ಸರ್ಕಾರಕ್ಕೆ ಜಮೆಯಾಗುವುದು.
9. ಭಾಗ್ಯಲಕ್ಷ್ಮಿ ಯೋಜನೆಯಡಿ ದಿನಾಂಕ:31.03.2011ರ ನಂತರ ಜನಿಸಿದ ಫಲಾನುಭವಿಗಳನ್ನು ಆಯ್ಕೆ ಮಾಡಲು ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿಯನ್ನು ಕಡ್ಡಾಯವಾಗಿ ಆಯ್ಕೆಯ ಮಾನದಂಡವಾಗಿ ಪರಿಗಣಿಸುವುದು..
10. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿಯನ್ನು ಆಯ್ಕೆ ಮಾನದಂಡವಾಗಿ ಪರಿಗಣಿಸುವಾಗ ಕುಟುಂಬದ ಮುಖ್ಯಸ್ಥರ ಭಾವಚಿತ್ರ ಹಾಗೂ ಫಲಾನುಭವಿ ಪೋಷಕರ ಹೆಸರು ಇರುವ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿಯನ್ನು ಪರಿಗಣಿಸುವುದು.
11. ಫಲಾನುಭವಿಗಳ ನಿಗದಿತ ವಾರ್ಷಿಕ ಗುರಿ ರೂ.2.50 ಲಕ್ಷಕ್ಕಿಂತ ಹೆಚ್ಚಿಗೆಯಾದಲ್ಲಿ ಫಲಾನುಭವಿಗೆ ಸೌಲಭ್ಯ ನೀಡುವ ಮೊದಲು ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

ಖಖಖ **<u>ಅರ್ಹತಾ ಮಾನದಂಡ:-</u>**

1. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ ಶಾಶ್ವತ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳು ಯೋಜನೆಯಡಿ ನೊಂದಣಿ ಮಾಡಲು ಅರ್ಹರಿರುತ್ತಾರೆ.
2. ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು. ಈ ಕುಟುಂಬವು ಮಗುವಿನ ತಂದೆ ಅಥವಾ ತಾಯಿ ಯಾರದಾರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿರಬೇಕು. ವಿಶೇಷ ಪ್ರಕರಣಗಳಲ್ಲಿ ಅಂದರೆ ಮೊದಲನೇ ಹೆರಿಗೆಯಲ್ಲಿ ಒಂದು ಹೆಣ್ಣು ಮಗು ಸೌಲಭ್ಯ ಪಡೆದು ನಂತರ ಎರಡನೇ ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ, ಈ ಹೆಣ್ಣು ಮಕ್ಕಳಿಗೂ ಸೌಲಭ್ಯ ನೀಡುವುದು. ಈ ಸೌಲಭ್ಯವನ್ನು ಎರಡು ಹೆರಿಗೆಗೆ ಮಾತ್ರ ಮಿತಿಗೊಳಿಸುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಕುಟುಂಬದ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು ಎಂಬ ನಿಯಮವನ್ನು ಸಡಿಲಿಸಲಾಗಿದೆ.
3. ಈ ಯೋಜನೆಯನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು. ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವ ಪ್ರದೇಶಗಳಲ್ಲಿ ವಾಸಿಸುವ ಪೋಷಕರು ತಮ್ಮ ಸಮೀಪದ ಅಂಗನವಾಡಿ ಕೇಂದ್ರದಲ್ಲಿ ನೊಂದಣಿ ಮಾಡುವುದು.
4. ಪರಿಪಕ್ವ ಮೊತ್ತವನ್ನು ಪಡೆಯಲು ಫಲಾನುಭವಿ ಮಗು ಕನಿಷ್ಠ 8ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರಬೇಕು. ಆದರೆ ವಿಕಲಚೇತನ ಮಕ್ಕಳಿಗೆ ವಿನಾಯಿತಿ ನೀಡಲಾಗಿದ್ದು, ಸದರಿ ಮಕ್ಕಳು 1 ರಿಂದ 5ನೇ ತರಗತಿವರೆಗೆ ವ್ಯಾಸಂಗ ಮಾಡಿರಬೇಕು, ಒಂದು ವೇಳೆ ವಿಕಲಚೇತನ ಮಕ್ಕಳು ತೀವ್ರತರವಾದ ವಿಕಲತೆಯಿಂದ ಬಳಲುತ್ತಿದ್ದಲ್ಲಿ, ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಪ್ರತಿ ಪ್ರಕರಣಗಳ ಸಾಧಕ



ಬಾಧಕಗಳನ್ನು ಪರಿಶೀಲಿಸಿ, ಈ ಷರತ್ತನ್ನು ಸಹ ಸಡಿಲಿಸಲು ಅಧಿಕಾರ ನೀಡಿ ಆದೇಶಿಸಿದೆ. 5ನೇ ಮತ್ತು 8ನೇ ತರಗತಿ ಉತ್ತೀರ್ಣರಾಗಿರುವ ಶಾಲಾ ಮುಖ್ಯೋಪಾಧ್ಯಾಯರಿಂದ ದೃಢೀಕರಣ ಪಡೆದು ಸಲ್ಲಿಸುವುದು.

5. ಬಾಲಕಾರ್ಮಿಕ ನಿಷೇಧ ಕಾಯ್ದೆ, 1986 ರಂತೆ ಬಾಲ ಕಾರ್ಮಿಕಳಾಗಿರತಕ್ಕದ್ದಲ್ಲ.
6. 18 ವರ್ಷ ಪೂರೈಸುವ ಮೊದಲು ವಿವಾಹವಾಗತಕ್ಕದ್ದಲ್ಲ.
7. ಆಯ್ಕೆಯಾದ ಫಲಾನುಭವಿಯು ಮೇಲೆ ತಿಳಿಸಿದ ಅರ್ಹತೆಯ ಮಾನದಂಡಗಳಲ್ಲಿನ ಯಾವುದೇ ಒಂದು ಷರತ್ತನ್ನು ಪೂರೈಸದಿದ್ದಲ್ಲಿಯೂ ಸಹ ಸೌಲಭ್ಯವನ್ನು ಮುಟ್ಟುಗೋಲು ಹಾಕಲಾಗುವುದು.
8. ದಿನಾಂಕ:01.04.2006 ರಿಂದ 31.07.2008ರ ವರೆಗೆ ಜನಿಸಿ ಯೋಜನೆಯಡಿ ನೊಂದಣಿಯಾದ ಮಕ್ಕಳು ವಿದ್ಯಾರ್ಥಿ ವೇತನ ಪಡೆಯಲು ಪ್ರತಿ ತರಗತಿಯಲ್ಲಿಯೂ ವರ್ಷದಿಂದ ವರ್ಷಕ್ಕೆ ತೇರ್ಗಡೆ ಹೊಂದಬೇಕು.

## ಋಗಿ ಅರ್ಜಿ ಸಲ್ಲಿಸುವ ವಿಧಾನ:-

ಪೋಷಕರು ಭಾಗ್ಯಲಕ್ಷ್ಮಿ ಅರ್ಜಿ ನಮೂನೆಯನ್ನು ಸಮೀಪದ ಅಂಗನವಾಡಿ ಕೇಂದ್ರದಿಂದ ಪಡೆದು ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ ಆರು ತಿಂಗಳೊಳಗೆ ಅಂಗನವಾಡಿ ಕಾರ್ಯಕರ್ತೆಗೆ ಸಲ್ಲಿಸಿ ಸ್ವೀಕೃತಿ ಪಡೆಯುವುದು.

- ಅಂಗನವಾಡಿ ಕಾರ್ಯಕರ್ತೆ ಸದರಿ ಅರ್ಜಿಯನ್ನು ಪರಿಶೀಲಿಸಿ, ಅರ್ಜಿ/ದಾಖಲಾತಿಗಳು ಕ್ರಮಬದ್ಧವಾಗಿಲ್ಲದಿದ್ದಲ್ಲಿ ಪೋಷಕರಿಗೆ ನಿಗಧಿತ ಅವಧಿಯ ದಿನಾಂಕ ನಮೂದಿಸಿ ಹಿಂಬರಹವನ್ನು ನೀಡುವುದು. ಅರ್ಹ ಅರ್ಜಿಯನ್ನು ತನ್ನ ದೃಢೀಕರಣದೊಂದಿಗೆ ಮೇಲ್ವಿಚಾರಕಿಗೆ ಸಲ್ಲಿಸುವುದು.
- ಮೇಲ್ವಿಚಾರಕಿ ಅರ್ಜಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ಅರ್ಹ ಫಲಾನುಭವಿಯಾಗಿದ್ದಲ್ಲಿ ಮಗುವಿಗೆ ಒಂದು ವರ್ಷ ಪೂರ್ಣಗೊಳ್ಳುವುದಕ್ಕಿಂತ ಮುಂಚಿತವಾಗಿ ಸದರಿ ಅರ್ಜಿಯನ್ನು ತಂತ್ರಾಂಶದಲ್ಲಿ ನೋಂದಣಿ ಮಾಡಿ ಬಾಂಡ್ ಐಡಿ ಸಂಖ್ಯೆಯನ್ನು ಪಡೆಯುವುದು.

## ಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಅವಶ್ಯಕ ದಾಖಲಾತಿಗಳು:-

- ಮಗುವಿನ ಜನನ ಪ್ರಮಾಣ ಪತ್ರದ ದೃಢೀಕೃತ ಪ್ರತಿ
- ಶಾಶ್ವತ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿ ದೃಢೀಕೃತ ಪ್ರತಿ
- ಪೋಷಕರೊಂದಿಗೆ ಮಗುವಿರುವ ಭಾವಚಿತ್ರ
- ಆದ್ಯತೆ ಮೇರೆಗೆ ಮಗುವಿನ ಆಧಾರ್ ಗುರುತಿನ ಚೀಟಿಯ ಪ್ರತಿ / ವಿಳಾಸದ ಯಾವುದೇ ದಾಖಲಾತಿಗಳು
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಜಾತಿ ಪ್ರಮಾಣ ಪತ್ರ
- ವಿವಾಹ ನೋಂದಣಿ ಪ್ರಮಾಣ ಪತ್ರದ ಪ್ರತಿ/ಪೋಷಕರ ಸ್ವಯಂ ಘೋಷಣಾ ವಿವಾಹ ಪ್ರಮಾಣ ಪತ್ರದ ಪ್ರತಿ(ನಮೂನೆ 6)
- ವಿವಾಹ ನೋಂದಣಿ ಪ್ರಮಾಣ ಪತ್ರದಿಂದ ಕೆಳಕಂಡವರಿಗೆ ವಿನಾಯಿತಿ ನೀಡಲಾಗಿದೆ ಹಾಗೂ ಕೆಳಗೆ ನಮೂದಿಸಿರುವವರ ಮೂಲಕ ದೃಢೀಕರಣ ಪ್ರಮಾಣ ಪತ್ರ ಸಲ್ಲಿಸಬಹುದಾಗಿದೆ.

| | | |
|---|---|---|
| 1 | ಪರಿತ್ಯಕ್ತೆ | ಸ್ವಯಂ ಘೋಷಣಾ ಪ್ರಮಾಣ ಪತ್ರ [ನಮೂನೆ (8)] |
| 2 | ಏಕ ಪೋಷಕರು | ಸ್ವಯಂ ಘೋಷಣಾ ಪ್ರಮಾಣ ಪತ್ರ [ನಮೂನೆ(7)] |
| 3 | ವಿಚ್ಛೇದಿತರು | ನ್ಯಾಯಾಲಯದ ತೀರ್ಪಿನ ಪ್ರತಿ/ಸ್ವಯಂ ಘೋಷಣಾ ಪ್ರಮಾಣ ಪತ್ರದ ಪ್ರತಿ |



| | | |
|---|---|---|
| 4 | ವಿಧವೆ/ವಿಧುರ | ಗಂಡ/ಹೆಂಡತಿಯ ಮರಣ ಪ್ರಮಾಣ ಪತ್ರದ ಪ್ರತಿ |
| 6 | ಪರಸ್ಪರ ಒಪ್ಪಿಗೆಯಿಂದ | ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ/ |

| | | |
|---|---|---|
| | ಒಂದೇ ಸೂರಿನಡಿ ಜೀವಿಸುವವರು | ಗ್ರಾಮ ಲೆಕ್ಕಿಗರು |
| 7 | ಅನಾಥರು | ಇಬ್ಬರು ಪೋಷಕರ ಮರಣ ದೃಢೀಕರಣ ಪತ್ರದ ಪ್ರತಿ |

ಇಂತಹವರ ಮಕ್ಕಳಿಗೆ ಯೋಜನೆಯಡಿ ಅವಕಾಶ ಕಲ್ಪಿಸಲು ಮೇಲಿನ ಪ್ರಾಧಿಕಾರದಿಂದ ಪ್ರಮಾಣ ಪತ್ರ ನೀಡುವುದು ಹಾಗೂ ಈ ಬಗ್ಗೆ **ಸ್ವಯಂ ಘೋಷಿತ ಪ್ರಮಾಣ ಪತ್ರ ನೀಡುವವರು ರೂ.20/-ಗಳ ಸ್ಟಾಂಪ್ ಪೇಪರ್‌ನಲ್ಲಿ ನೀಡುವುದು.**

- ಎರಡನೇ ಮಗುವನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಯೋಜನೆಯಡಿ ನಿಗದಿಪಡಿಸಿರುವ ಮೇಲಿನ ಎಲ್ಲಾ ದಾಖಲೆಗಳೊಂದಿಗೆ ಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆ ಪದ್ಧತಿಯನ್ನು ಅಳವಡಿಸಿಕೊಂಡಿರುವ ಬಗ್ಗೆ ಪ್ರಮಾಣ ಪತ್ರದ ದೃಢೀಕೃತ ಪ್ರತಿ ನೀಡುವುದು.

**IX <u>ದಾಖಲಾತಿಗಳ ನಿರ್ವಹಣೆ:-</u>**

**<u>ಭಾಗ್ಯಲಕ್ಷ್ಮಿ ಯೋಜನೆಗೆ ಸಂಬಂಧಪಟ್ಟಂತೆ ಅಂಗನವಾಡಿ ಕೇಂದ್ರದಲ್ಲಿ ನಿರ್ವಹಿಸಬೇಕಾದ ದಾಖಲಾತಿಗಳು</u>**

1) ಯೋಜನೆಯಡಿಯಲ್ಲಿ ನೋಂದಣಿಯಾದ ಹಾಗೂ ಬಾಂಡ್ ಸ್ವೀಕರಿಸಿ ವಿತರಿಸಲಾದ ಫಲಾನುಭವಿಗಳ ವಹಿ
2) ಮರಣ ಹೊಂದಿದ ಫಲಾನುಭವಿಗಳ ದಾಖಲಾತಿ ವಹಿ (ಮೇಲ್ವಿಚಾರಕಿಗೆ ವರದಿ ಮಾಡಿದ ದಿನಾಂಕದೊಂದಿಗೆ)
3) ಪೋಷಕರ ಮರಣ ವಿಮೆ ಪಡೆದಿರುವ ಫಲಾನುಭವಿಗಳ ದಾಖಲಾತಿ ವಹಿ
4) ವಲಸೆ ಹೋಗಿರುವ ಫಲಾನುಭವಿಗಳ ದಾಖಲಾತಿ ವಹಿ
5) ಶಾಲಾ ಪೂರ್ವ ಶಿಕ್ಷಣ ಪಡೆಯಲು ಅಂಗನವಾಡಿಯಲ್ಲದೇ ಬೇರೆ ಶಾಲೆಗಳಿಗೆ ದಾಖಲಾದ ವಿವರದ ವಹಿ
6) ಪ್ರತಿ ಮಗುವಿನ ವೈಯಕ್ತಿಕ ಕಡತ (ಎಲ್ಲಾ ಅಗತ್ಯ ದಾಖಲೆಗಳ ಪ್ರತಿ ಹಾಗೂ ಭಾಗ್ಯಲಕ್ಷ್ಮಿ ಬಾಂಡ್‌ನ ಪ್ರತಿಯೊಂದಿಗೆ)
7) ತಾಯಂದಿರ ಸಭೆ ನಡವಳಿ ಪುಸ್ತಕ (ತಾಯಂದಿರ ಸಹಿಯೊಂದಿಗೆ)

**<u>ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸಬೇಕಾದ ದಾಖಲಾತಿಗಳು:-</u>**

1) ಯೋಜನೆಯಡಿಯಲ್ಲಿ ನೋಂದಣಿಯಾದ ಹಾಗೂ ಬಾಂಡ್ ವಿತರಿಸಲಾದ ಫಲಾನುಭವಿಗಳ ದಾಖಲಾತಿಗಳ ವಹಿ
2) ಮರಣ ಹೊಂದಿದ ಫಲಾನುಭವಿಗಳ ದಾಖಲಾತಿ ವಹಿ(ಮೇಲಧಿಕಾರಿಗಳಿಗೆ ವರದಿ ಮಾಡಿದ ದಿನಾಂಕದೊಂದಿಗೆ)
3) ಪೋಷಕರ ಮರಣ ವಿಮೆ ಪಡೆದಿರುವ ಫಲಾನುಭವಿಗಳ ದಾಖಲಾತಿ ವಹಿ
4) ವಲಸೆ ಹೋಗಿರುವ ಫಲಾನುಭವಿಗಳ ದಾಖಲಾತಿ ವಹಿ
5) ಪ್ರತಿ ಮಗುವಿನ ವೈಯಕ್ತಿಕ ಕಡತ(ಎಲ್ಲಾ ಅಗತ್ಯ ದಾಖಲೆಗಳ ಪ್ರತಿ ಹಾಗೂ ಭಾಗ್ಯಲಕ್ಷ್ಮಿ ಬಾಂಡ್‌ನ ಪ್ರತಿಯೊಂದಿಗೆ)



**X <u>ನಿಯಮ ಮತ್ತು ಜವಾಬ್ದಾರಿಗಳು:-</u>**

1. **<u>ಅಂಗನವಾಡಿ ಕಾರ್ಯಕರ್ತೆ:-</u>**

- ಅರ್ಹ ಕುಟುಂಬದ ಮಹಿಳೆಯರು ಗರ್ಭಿಣಿಯಾಗಿರುವಾಗಲೇ ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯದ ಬಗ್ಗೆ ತಾಯಂದಿರ ಸಭೆಯಲ್ಲಿ ಮಾಹಿತಿ ನೀಡುವುದು.
- ತನ್ನ ಜನಸಂಖ್ಯಾ ವ್ಯಾಪ್ತಿಯಲ್ಲಿ ಜನಿಸಿದ ಎಲ್ಲಾ ಹೆಣ್ಣು ಮಕ್ಕಳ ಮಾಹಿತಿಯನ್ನು ಸಂಗ್ರಹಿಸಿಡುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುವ ಮಕ್ಕಳ ಪೋಷಕರಿಗೆ ಭಾಗ್ಯಲಕ್ಷ್ಮಿ ಅರ್ಜಿಯನ್ನು ನೀಡಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ನಮೂನೆಯನ್ನು ಮಗು ಹುಟ್ಟಿದ ಆರು ತಿಂಗಳ ಒಳಗಾಗಿ ಕೇಂದ್ರಕ್ಕೆ ಸಲ್ಲಿಸುವಂತೆ ತಿಳಿಸುವುದು ಹಾಗೂ ತಿಳಿಸಿರುವುದಕ್ಕೆ ಪೋಷಕರ ಸಹಿ ಪಡೆಯುವುದು.
- ಪೋಷಕರಿಂದ ಪಡೆದ ಅರ್ಜಿಯನ್ನು ಪರಿಶೀಲಿಸಿ ಪೋಷಕರಿಗೆ ಸಹಿಯೊಂದಿಗೆ ಹಿಂಬರಹವನ್ನು ನೀಡುವುದು ಹಾಗೂ ಅರ್ಹ ಅರ್ಜಿಯನ್ನು ಮೇಲ್ವಿಚಾರಕಿಗೆ ಸಲ್ಲಿಸಿ ಸಹಿಯೊಂದಿಗೆ ಹಿಂಬರಹ ಪಡೆಯುವುದು.
- ಯೋಜನೆಯಡಿ ಕಾಲ ಕಾಲಕ್ಕೆ ಫಲಾನುಭವಿಗಳಿಗೆ ಲಭ್ಯವಿರುವ ಮಧ್ಯಂತರ ಸೌಲಭ್ಯಗಳ ಬಗ್ಗೆ ತಿಳುವಳಿಕೆ ನೀಡುವುದು ಹಾಗೂ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸಲು ಸಕಾಲದಲ್ಲಿ ಪೋಷಕರಿಂದ ಅರ್ಜಿ ಹಾಗೂ ಇನ್ನಿತರ ಅಗತ್ಯ ದಾಖಲಾತಿಗಳನ್ನು ಪಡೆದು ಮೇಲ್ವಿಚಾರಕಿಗೆ ಸಲ್ಲಿಸುವುದು.
- ಯೋಜನೆಯ ಸಮಗ್ರ ಷರತ್ತು/ನಿಬಂಧನೆಗಳ ಬಗ್ಗೆ ಪ್ರತಿ ಪೋಷಕರಿಗೆ ವ್ಯಾಪಕ ತಿಳುವಳಿಕೆ ನೀಡುವುದು.
- ಯೋಜನೆಯ ಬಗ್ಗೆ ಗ್ರಾಮ ಸಭೆ, ತಾಯಂದಿರ ಸಭೆ, ಸ್ವಸಹಾಯ ಸಂಘಗಳ ಸಭೆ ಮತ್ತು ಇತರೆ ಸಭೆಗಳಲ್ಲಿ ವ್ಯಾಪಕ ಪ್ರಚಾರ ಮಾಡುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಬಗ್ಗೆ ಪೋಷಕರಿಗೆ ತರಬೇತಿ ನೀಡುವುದು.

2. **ಮೇಲ್ವಿಚಾರಕಿ:–**

- ತನ್ನ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯರು ಎಲ್ಲಾ ಅರ್ಹ ಮಕ್ಕಳ ಅರ್ಜಿ ಸ್ವೀಕರಿಸಿರುವುದನ್ನು ಮೇಲ್ವಿಚಾರಣೆ ಮಾಡುವುದು.
- ಅಂಗನವಾಡಿ ಕಾರ್ಯಕರ್ತೆಯಿಂದ ಸಕಾಲದಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಕಾರ್ಯಕರ್ತೆಗೆ ದೃಢೀಕರಿಸಿದ ಸ್ವೀಕೃತಿಯನ್ನು ನೀಡುವುದು.
- ಅಂಗನವಾಡಿ ಕಾರ್ಯಕರ್ತೆಯರಿಂದ ಪಡೆದ ಅರ್ಜಿಯನ್ನು ಪರಿಶೀಲಿಸಿ ಅರ್ಹ ಅರ್ಜಿಯಾಗಿದ್ದಲ್ಲಿ ಮಗುವಿಗೆ ಒಂದು ವರ್ಷ ಪೂರ್ಣಗೊಳ್ಳುವುದಕ್ಕಿಂತ ಮುಂಚಿತವಾಗಿ ತಂತ್ರಾಂಶದಲ್ಲಿ ನೋಂದಣಿ ಮಾಡಿ ಬಾಂಡ್ ಐಡಿ ಸಂಖ್ಯೆಯನ್ನು ಪಡೆದುಕೊಳ್ಳುವುದು.
- ಆಗಿಂದ್ದಾಗೆ ಸದರಿ ಐಡಿ ಸಂಖ್ಯೆ ಬಗ್ಗೆ ತಂತ್ರಾಂಶದಲ್ಲಿ ಪರಿಶೀಲಿಸಿ ಮಂಜೂರಾತಿ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಅಂಗನವಾಡಿಗೆ ಭೇಟಿ ನೀಡಿದಾಗ ದಾಖಲಾತಿಗಳ ನಿರ್ವಹಣೆ ಬಗ್ಗೆ ಮೇಲ್ವಿಚಾರಣೆ ಮಾಡುವುದು.
- ಯೋಜನೆಯಡಿ ಫಲಾನುಭವಿಗೆ ಒದಗಿಸಬೇಕಾದ ಸೌಲಭ್ಯಗಳು, ಮಧ್ಯಂತರ ಸವಲತ್ತುಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು.
- ವೃತ್ತ ಸಭೆಗಳಲ್ಲಿ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿ ನೀಡುವುದು.
- ಗ್ರಾಮ ಮತ್ತು ಹೋಬಳಿ ಮಟ್ಟದ ಸಭೆ ಹಾಗೂ ಇತರೆ ಸಭೆಗಳಲ್ಲಿ ಹೆಚ್ಚಿನ ಮಾಹಿತಿ ನೀಡಿ ಪ್ರಚಾರ ನೀಡುವುದು.
- ಯೋಜನೆಯ ಬಗ್ಗೆ ತಾಯಂದಿರಿಗೆ ತರಬೇತಿ ನೀಡುವುದು.



3. **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು:–**

- ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಮೇಲ್ವಿಚಾರಕಿಯು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿರುವ ಮಾಹಿತಿಯೊಂದಿಗೆ ತಾಳೆ ಮಾಡುವುದು.
- ಪೋಷಕರು ಅರ್ಜಿಯೊಂದಿಗೆ ಸಲ್ಲಿಸಿರುವ ಬಿಪಿಎಲ್ ಕಾರ್ಡ್‌ನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ತಂತ್ರಾಂಶದ ಆನ್‌ಲೈನ್‌ನೊಂದಿಗೆ ತಾಳೆ ಮಾಡಿ ಖಚಿತಪಡಿಸಿಕೊಳ್ಳುವುದು.
- ಒಂದೇ ಮಗುವಿನ ಹೆಸರು ಎರಡು ಬಾರಿ ಆನ್‌ಲೈನ್‌ನಲ್ಲಿ ನೋಂದಣಿಯಾಗದಂತೆ ಪರಿಶೀಲಿಸಿ ಶಿಫಾರಸ್ಸು ಮಾಡುವುದು.
- ಯೋಜನೆಯಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳು ತಂತ್ರಾಂಶದಲ್ಲಿ ದಾಖಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ನೋಂದಣಿಯಾದ ಎಲ್ಲಾ ಅರ್ಹ ಅರ್ಜಿಗಳನ್ನು ಸಕಾಲದಲ್ಲಿ ಉಪ ನಿರ್ದೇಶಕರಿಗೆ ಶಿಫಾರಸ್ಸು ಮಾಡಿ ಕಳುಹಿಸುವುದು.
- ಮಧ್ಯಂತರ ಸೌಲಭ್ಯ ಪಡೆಯಲು ಅರ್ಹರಾಗಿರುವ ಎಲ್ಲಾ ಫಲಾನುಭವಿಗಳಿಗೆ ಸದರಿ ಸೌಲಭ್ಯವನ್ನು ಒದಗಿಸುವುದು, ಈ ಬಗ್ಗೆ ತಂತ್ರಾಂಶದಲ್ಲಿ ಪರಿಶೀಲಿಸಿ ನೋಂದಣಿಯಾಗಿರುವ ಎಲ್ಲಾ ಪ್ರಕರಣಗಳಿಗೂ ಸಂಬಂಧಪಟ್ಟಂತೆ ಅಗತ್ಯ ದಾಖಲಾತಿಗಳನ್ನು ಪಡೆದು ಉಪ ನಿರ್ದೇಶಕರಿಗೆ ಶಿಫಾರಸ್ಸು ಮಾಡುವುದು.
- ಪಾಲುದಾರ ಹಣಕಾಸು ಸಂಸ್ಥೆಯಿಂದ ಸ್ವೀಕೃತವಾದ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಸಕಾಲದಲ್ಲಿ ಫಲಾನುಭವಿಗಳಿಗೆ ವಿತರಿಸುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಚಿಸಲಾದ ತಾಲ್ಲೂಕು ಮಟ್ಟದ ಕಾರ್ಯಪಡೆಯ ಸಭೆಯನ್ನು ಪ್ರತಿ ತ್ರೈಮಾಸಿಕದಲ್ಲಿ ನಡೆಸುವುದು ಹಾಗೂ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಚರ್ಚಿಸುವುದು.
- ಫಲಾನುಭವಿ ಮಗು ಮರಣ ಹೊಂದಿದ್ದಲ್ಲಿ ಸದರಿ ಮಗುವಿನ ಸೌಲಭ್ಯವನ್ನು ರದ್ದುಗೊಳಿಸುವ ಬಗ್ಗೆ ತುರ್ತಾಗಿ ಕ್ರಮಕೈಗೊಳ್ಳುವುದು.
- ಫಲಾನುಭವಿ ಪೋಷಕರು ಯೋಜನೆಯ ಮಾನ ದಂಡಗಳನ್ನು ಪಾಲಿಸದೇ ಇದ್ದಲ್ಲಿ ಸೌಲಭ್ಯವನ್ನು ರದ್ದುಗೊಳಿಸಲು ಕ್ರಮಕೈಗೊಳ್ಳುವುದು.
- ಪರಿಪಕ್ವ ಮೊತ್ತ ಪಡೆಯಲು ಅರ್ಹರಾಗಿರುವ ಫಲಾನುಭವಿಗಳ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಉಪ ನಿರ್ದೇಶಕರಿಗೆ ಸಲ್ಲಿಸುವುದು.
- ಯೋಜನೆ ಕುರಿತಂತೆ ಹೆಚ್ಚಿನ ಪ್ರಚಾರ ಹಾಗೂ ತರಬೇತಿಯನ್ನು ನೀಡುವುದು.
- ದ್ವಿಗುಣ ಬಾಂಡ್ ಸ್ವೀಕೃತಿಯಾಗಿದ್ದಲ್ಲಿ ಸದರಿ ಬಾಂಡ್‌ಗಳನ್ನು ತಕ್ಷಣ ಪಾಲುದಾರ ಹಣಕಾಸು ಸಂಸ್ಥೆಗೆ ಹಿಂದಿರುಗಿಸುವುದು ಹಾಗೂ ನಿರ್ದೇಶನಾಲಯಕ್ಕೆ ವರದಿ ಮಾಡುವುದು.

4. **<u>ಜಿಲ್ಲಾ ಉಪ ನಿರ್ದೇಶಕರು:-</u>**

- ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆನ್‌ಲೈನ್‌ನಲ್ಲಿ ಶಿಫಾರಸ್ಸು ಮಾಡಿರುವ ಮಾಹಿತಿಯೊಂದಿಗೆ ತಾಳೆ ಮಾಡುವುದು.
- ಪೋಷಕರು ಅರ್ಜಿಯೊಂದಿಗೆ ಸಲ್ಲಿಸಿರುವ ಬಿಪಿಎಲ್ ಕಾರ್ಡ್‌ನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ತಂತ್ರಾಂಶದ ಆನ್‌ಲೈನ್‌ನೊಂದಿಗೆ ತಾಳೆ ಮಾಡಿ ಖಚಿತಪಡಿಸಿಕೊಳ್ಳುವುದು.
- ಒಂದೇ ಮಗುವಿನ ಹೆಸರು ಎರಡು ಬಾರಿ ಆನ್‌ಲೈನ್‌ನಲ್ಲಿ ನೋಂದಣಿಯಾಗದಂತೆ ಪರಿಶೀಲಿಸಿ ಮಂಜೂರಾತಿ ನೀಡುವುದು.



- ತಂತ್ರಾಂಶದ ಮೂಲಕ ಉಪ ನಿರ್ದೇಶಕರ ಹಂತಕ್ಕೆ ಬಂದಿರುವ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಸಕಾಲದಲ್ಲಿ ಮಂಜೂರಾತಿ ನೀಡುವುದು.

- ಮಧ್ಯಂತರ ಸೌಲಭ್ಯ ಪಡೆಯಲು ತಾಲ್ಲೂಕುಗಳಿಂದ ಸ್ವೀಕೃತವಾದ ಅರ್ಜಿಗಳನ್ನು ಪಾಲುದಾರ ಹಣಕಾಸು ಸಂಸ್ಥೆಗೆ ಕಳುಹಿಸಿಕೊಡುವುದು ಹಾಗೂ ಮಂಧ್ಯತರ ಸೌಲಭ್ಯವನ್ನು ಫಲಾನುಭವಿಗಳಿಗೆ ಒದಗಿಸುವುದು.
- ಪಾಲುದಾರ ಹಣಕಾಸು ಸಂಸ್ಥೆಯಿಂದ ಸ್ವೀಕೃತವಾದ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಸೂಕ್ತ ಸಮಯದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡುವುದು. ಈ ಬಗ್ಗೆ ತಂತ್ರಾಂಶದಲ್ಲಿ ಪರಿಶೀಲಿಸಿ ವಿವಿಧ ಹಂತಗಳಲ್ಲಿ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಂಜೂರಾತಿ ನೀಡಿಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಿಲ್ಲಾ ಮಟ್ಟದ ಕಾರ್ಯಪಡೆಯ ಸಭೆಯನ್ನು ಪ್ರತಿ ತ್ರೈಮಾಸಿಕದಲ್ಲಿ ನಡೆಸುವುದು ಹಾಗೂ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಚರ್ಚಿಸಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವುದು.
- ವರ್ಷದ ಪ್ರಾರಂಭದಲ್ಲಿ ತಪ್ಪದೆ ಲೆಕ್ಕ ಮರುಹೊಂದಾಣಿಕೆ ಮಾಡುವುದು.
- ಯೋಜನೆಯ ಬಗ್ಗೆ ಯೋಜನಾಧಿಕಾರಿಗಳಿಗೆ ಹಾಗೂ ಮೇಲ್ವಿಚಾರಕಿಯರಿಗೆ ಸೂಕ್ತ ತರಬೇತಿ ನೀಡುವುದು.
- ಫಲಾನುಭವಿಯ ಸಮರ್ಪಕ ಆಯ್ಕೆಯ ದಾಖಲೆಯನ್ನು ಖಚಿತಪಡಿಸುವುದು, ದಾಖಲೆಯ ಸಮಯದಲ್ಲಿ ಹೆಣ್ಣು ಮಗು ಮೊದಲನೆಯದೆ ಎರಡನೆಯದೆ ಎಂಬುದನ್ನು ಸಮರ್ಪಕವಾಗಿ ಪರಿಶೀಲಿಸುವುದು. ಯಾವುದೇ ದೋಷಪೂರಿತ/ಅಪೂರ್ಣಗೊಂಡ/ಅನರ್ಹ ಅರ್ಜಿಗಳು ಕಂಡು ಬಂದಲ್ಲಿ ಅವುಗಳನ್ನು ತಿರಸ್ಕರಿಸುವುದು ಹಾಗೂ ಭಾಗ್ಯಲಕ್ಷ್ಮಿ ಅರ್ಜಿಯನ್ನು ಯಾವುದೇ ವಿಳಂಬಕ್ಕೆ ಆಸ್ಪದ ಕೊಡದೆ ಸಕಾಲದಲ್ಲಿ ನೋಂದಣಿ ಮಾಡುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ತಪ್ಪು ಮಾಹಿತಿ ನೀಡಿದ, ಅದಕ್ಕೆ ಆಸ್ಪದ ನೀಡಿದ ಅಥವಾ ವಿಳಂಬಕ್ಕೆ ಕಾರಣರಾದ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿ/ಸಿಬ್ಬಂದಿ/ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮಕೈಗೊಳ್ಳಲಾಗುವುದು.

5. **<u>ನಿರ್ದೇಶನಾಲಯ:-</u>**

- ತಂತ್ರಾಂಶದಲ್ಲಿ ನೋಂದಣಿಯಾದ ಫಲಾನುಭವಿಗಳ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
- ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಫಲಾನುಭವಿಗಳಿಗೆ ಮಂಜೂರಾತಿ ನೀಡಿ ಅನುದಾನವನ್ನು ಪಾಲುದಾರ ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡುವುದು.
- ಬಿಡುಗಡೆಯಾದ ಅನುದಾನಕ್ಕೆ ಪಾಲುದಾರ ಹಣಕಾಸು ಸಂಸ್ಥೆಯಿಂದ ಉಪಯುಕ್ತತಾ ಪ್ರಮಾಣ ಪತ್ರವನ್ನು ಪಡೆಯುವುದು.
- ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಜಿಲ್ಲೆ ಹಾಗೂ ಹಣಕಾಸು ಸಂಸ್ಥೆಯೊಂದಿಗೆ ಭೌತಿಕ ಮತ್ತು ಆರ್ಥಿಕ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಿದ್ದಲ್ಲಿ ತಂತ್ರಾಂಶವನ್ನು ಅವಶ್ಯಕತೆಗನುಗುಣ ವಾಗಿ ನವೀಕರಿಸುವುದು.
- ಯೋಜನೆಯ ಬಗ್ಗೆ ಉಪ ನಿರ್ದೇಶಕರು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಕ್ತ ತರಬೇತಿ ನೀಡುವುದು.
- ಯೋಜನೆಯ ಕುರಿತಂತೆ ವ್ಯಾಪಕ ಪ್ರಚಾರ ನೀಡುವುದು.
- ಕಾಲಕಾಲಕ್ಕೆ ಉಪ ನಿರ್ದೇಶಕರುಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವುದು.



6. **<u>ಪೋಷಕರು:-</u>**

- ಸಕಾಲದಲ್ಲಿ ಭಾಗ್ಯಲಕ್ಷ್ಮಿ ಅರ್ಜಿಯನ್ನು ನಮೂನೆ 1ರಲ್ಲಿ ಭರ್ತಿಮಾಡಿ ಹಾಗೂ ನಮೂನೆ 2ರಲ್ಲಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸೂಕ್ತ ದಾಖಲೆಗಳೊಂದಿಗೆ ಅಂಗನವಾಡಿ ಕಾರ್ಯಕರ್ತೆಗೆ ಸಲ್ಲಿಸುವುದು ಹಾಗೂ ಸಲ್ಲಿಸಿರುವುದಕ್ಕೆ ಸಹಿಯೊಂದಿಗೆ ಸ್ವೀಕೃತಿ ಪಡೆಯುವುದು.
- ಅರ್ಜಿಯಲ್ಲಿ ಹೆಸರನ್ನು ನಮೂದಿಸುವಾಗ ಮಗುವಿನ ಜನನ ಪ್ರಮಾಣ ಪತ್ರದಲ್ಲಿ ಇರುವ ಹೆಸರನ್ನೇ ನಮೂದಿಸುವುದು.
- ಬಾಂಡ್‌ನ್ನು ಸುರಕ್ಷಿತವಾಗಿ ಇಡುವುದು ಹಾಗೂ ಯೋಜನೆಯ ಎಲ್ಲಾ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸುವುದು.
- ಫಲಾನುಭವಿ ಮಗುವಿಗೆ ಉತ್ತಮ ಶಿಕ್ಷಣವನ್ನು ನೀಡುವುದು.
- ಹೆಣ್ಣು ಮಗುವನ್ನು ಲಿಂಗಭೇಧ ತಾರತಮ್ಯ ಮಾಡದೇ ಸಾಕಬೇಕು.
- ಫಲಾನುಭವಿ ಮಗುವನ್ನು ಬಾಲಕಾರ್ಮಿಕತೆ/ಬಾಲ್ಯವಿವಾಹವಾಗದಂತೆ ರಕ್ಷಿಸುವುದು.
- ಖಾಯಂ ವಿಳಾಸ ಬದಲಾವಣೆಯಾದಲ್ಲಿ ಹೊಸ ವಿಳಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ತಪ್ಪದೇ ನೀಡುವುದು.
- ಒಂದು ವೇಳೆ ಫಲಾನುಭವಿ ಮಗು ಮರಣ ಹೊಂದಿದ್ದಲ್ಲಿ ಬಾಂಡ್‌ನ್ನು ಅಂಗನವಾಡಿ ಕಾರ್ಯಕರ್ತೆ/ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಹಿಂದಿರುಗಿಸಿ ಸ್ವೀಕೃತಿ ಪಡೆಯುವುದು.
- ಮಂಧ್ಯತರ ಸೌಲಭ್ಯ/ಪರಿಪಕ್ವ ಮೊತ್ತ ಪಡೆಯುವ ಸಂದರ್ಭದಲ್ಲಿ ಮಾತ್ರ ಮಗು ಮತ್ತು ಮಗುವಿ ತಾಯಿಯ ಹೆಸರಿನಲ್ಲಿ ಜಂಟಿ ಖಾತೆ ತೆರೆಯುವುದು.

**ಗಿಖಖಖ. <u>ಪೋಷಕರ ಹೆಸರು ಬದಲಾವಣೆ</u>**

* ಫಲಾನುಭವಿ ಮಗು ನೋಂದಣಿ ಸಂದರ್ಭದಲ್ಲಿ ನೀಡಿರುವ ಭಾಗ್ಯಲಕ್ಷ್ಮಿ ಅರ್ಜಿ ಹಾಗೂ ಜನನ ಪ್ರಮಾಣ ಪತ್ರದಲ್ಲಿ ನೀಡಿರುವ ಹೆಸರಿನಂತೆ ಬಾಂಡ್‌ನ್ನು ಮುದ್ರಿಸಲಾಗುವುದು. ಪರಿಪಕ್ವ ಮೊತ್ತ ಪಡೆಯುವವರೆಗೆ ಸದರಿ ಹೆಸರನ್ನು ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ. ಫಲಾನುಭವಿ ಮಗುವನ್ನು ಕಾನೂನು ಪ್ರಕಾರ ದತ್ತು ನೀಡಿದ್ದಲ್ಲಿ ಹಾಗೂ ದತ್ತು ಪೋಷಕರು ಭಾಗ್ಯಲಕ್ಷ್ಮಿ ಯೋಜನೆಯ ಮಾನದಂಡದ ಪ್ರಕಾರ ಸೌಲಭ್ಯ ಪಡೆಯಲು ಅರ್ಹರಾಗಿದ್ದಲ್ಲಿ ಮಾತ್ರ ಪೋಷಕರ ಹೆಸರನ್ನು ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ. ಆದರೆ ಯಾವುದೇ ಕಾರಣಕ್ಕೂ ಫಲಾನುಭವಿ ಮಗುವಿನ ಹೆಸರನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

**ಖಫ. <u>ಬಾಂಡ್ ಕಳೆದುಹೋದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು:</u>**

ಭಾಗ್ಯಲಕ್ಷ್ಮಿ ಬಾಂಡ್‌ನ್ನು ಸುರಕ್ಷಿತವಾಗಿ ಸಂರಕ್ಷಿಸುವುದು ಫಲಾನುಭವಿ ಪೋಷಕರ ಜವಾಬ್ದಾರಿಯಾಗಿದೆ. ಒಂದು ವೇಳೆ ಆಕಸ್ಮಿಕವಾಗಿ ಬಾಂಡ್‌ಗಳು ಕಳೆದುಹೋದಲ್ಲಿ ಹೊಸಬಾಂಡ್‌ಗಳನ್ನು ಮುದ್ರಿಸಲು ಅವಕಾಶವಿರುವುದಿಲ್ಲ. ಬಾಂಡ್ ಕಳೆದು ಹೋದ ತಕ್ಷಣ ಬಾಂಡ್ ಕಳೆದು ಹೋಗಿರುವ ಬಗ್ಗೆ ಸಮೀಪದ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು. ದೂರಿನ ಪ್ರತಿ ಮತ್ತು ಕಳೆದು ಹೋದ ಬಾಂಡ್‌ನ ಜೆರಾಕ್ಸ್ ಪ್ರತಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ದೃಢೀಕರಿಸಿ ಇಟ್ಟುಕೊಳ್ಳುವುದು. ಪರಿಪಕ್ವ ಮೊತ್ತ ಪಡೆಯುವ ಸಂದರ್ಭದಲ್ಲಿ ಅದನ್ನು ಒದಗಿಸುವುದು.

**ಫ. <u>ಪರಿಪಕ್ವ ಮೊತ್ತ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು:-</u>**

- ಮೂಲ ಭಾಗ್ಯಲಕ್ಷ್ಮಿ ಬಾಂಡ್
- ಒಂದು ವೇಳೆ ಬಾಂಡ್ ಕಳೆದು ಹೋಗಿದಲ್ಲಿ ಬಾಂಡ್‌ನ ದೃಢೀಕೃತ ಜೆರಾಕ್ಸ್ ಪ್ರತಿ ಹಾಗೂ ದೂರಿನ ಪ್ರತಿ.

- 8ನೇ ತರಗತಿ ಉತ್ತೀರ್ಣರಾಗಿರುವ ಬಗ್ಗೆ ಸಂಬಂಧ ಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದ ದೃಢೀಕರಣ ಪ್ರತಿ (ವಿಕಲಚೇತನ ಫಲಾನುಭವಿಯಾಗಿದ್ದಲ್ಲಿ 5ನೇ ತರಗತಿ ಉತ್ತೀರ್ಣರಾಗಿರುವ ಬಗ್ಗೆ ದೃಢೀಕರಣ ಪ್ರತಿ).
- ಭಾಗ್ಯಲಕ್ಷ್ಮಿ ಯೋಜನೆಯ ಎಲ್ಲಾ ಮಾನದಂಡಗಳನ್ನು ಪಾಲಿಸಿರುವ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಪಡೆದ ದೃಢೀಕರಣ ಪ್ರತಿ.

**ಫಿಖ. <u>ಬಾಂಡ್ ರದ್ದುಗೊಳಿಸುವುದು</u>**

- ಪೋಷಕರು ಯೋಜನೆಯ ಈ ಕೆಳಗಿನ ಮಾನದಂಡಗಳನ್ನು ಉಲ್ಲಂಘಿಸಿದ್ದಲ್ಲಿ
    1. ಕುಟುಂಬದಲ್ಲಿ ಮಕ್ಕಳ ಸಂಖ್ಯೆ 2ನ್ನು ಮೀರುವುದು.
    2. ಫಲಾನುಭವಿ ಮಗು ಬಾಲಕಾರ್ಮಿಕಳಾದಲ್ಲಿ/ಬಾಲ್ಯವಿವಾಹವಾದಲ್ಲಿ
    3. ಮಗು ಮರಣ ಹೊಂದಿದ್ದಲ್ಲಿ
- ಸುಳ್ಳು ದಾಖಲಾತಿಗಳನ್ನು ಒದಗಿಸಿ ಬಾಂಡ್ ಪಡೆದಿದ್ದಲ್ಲಿ ಹಾಗೂ ನೋಂದಣಿ ಸಮಯದಲ್ಲಿ ಸುಳ್ಳು ಮಾಹಿತಿ ನೀಡಿದ್ದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬಾಂಡ್ ರದ್ದುಗೊಳಿಸಲು ತಪ್ಪದೇ ಕ್ರಮವಹಿಸುವುದು.

**ಫಿಖಖ <u>ರಾಜ್ಯ ಸರ್ಕಾರದ ಇತರೆ ಇಲಾಖೆಗಳ ಜವಾಬ್ದಾರಿಗಳು:-</u>**

**1. <u>ಕಂದಾಯ ಇಲಾಖೆ:-</u>**

- ಫಲಾನುಭವಿಯ ಜನನ-ಮರಣದ ಹಾಗೂ ವಿವಾಹದ ವಿವರಗಳನ್ನು ದಾಖಲಿಸುವುದು. ಫಲಾನುಭವಿಯ ತಂದೆ/ತಾಯಿ : ಪೋಷಕರು ಗ್ರಾಮೀಣ ಭೂರಹಿತ ಕುಟುಂಬಕ್ಕೆ ಸೇರಿದ್ದಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಕಂಇ 25 ಡಿಎಸ್‌ಪಿ 2008 ದಿನಾಂಕ:31.03.2008 ರನ್ವಯ ಆಮ್ ಆದ್ಮಿ(ಜನಶ್ರೀ) ವಿಮಾ ಯೋಜನೆಯಡಿಯಲ್ಲಿ ಸರ್ಕಾರವು ವಂತಿಗೆಯನ್ನು ಭರಿಸುವ ಜೀವ ವಿಮೆ ಮಾಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

**2. <u>ಯೋಜನಾ ಇಲಾಖೆ:-</u>**

ಮಾನವ ಸಂಪನ್ಮೂಲ ಕ್ರೋಢೀಕರಣ – ಈ ಯೋಜನೆಯ ಆಗುಹೋಗುಗಳ ಪ್ರಗತಿಯ ಫಲಿತಾಂಶದ ಬಗ್ಗೆ ಸಲಹೆ ನೀಡುವುದು.

**3. <u>ನಗರಾಭಿವೃದ್ಧಿ ಇಲಾಖೆ:-</u>**

- ರಾಜ್ಯದ ಮಹಾನಗರ ಪಾಲಿಕೆ/ನಗರ ಸಭೆ ವ್ಯಾಪ್ತಿಯ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಲ್ಲಿ ಜನಿಸುವ ಹೆಣ್ಣು ಮಕ್ಕಳನ್ನು ಗುರುತಿಸಲು ಸಹಾಯ ಮಾಡುವುದು.
- ಈ ಯೋಜನೆಯಡಿ ಫಲಾನುಭವಿಗಳನ್ನು ನೋಂದಾಯಿಸಲು ಅರ್ಜಿಗಳನ್ನು ಪಡೆದು ಪರಿಶೀಲಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ರವಾನಿಸುವುದು.

**4. <u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:-</u>**

- ಅಂಗನವಾಡಿ ಕೇಂದ್ರಗಳು ಇಲ್ಲದ ಸ್ಥಳಗಳಲ್ಲಿ ಗ್ರಾಮೀಣ ಪ್ರದೇಶ/ಗುಡ್ಡಗಾಡು ಪ್ರದೇಶಗಳಲ್ಲಿ ಭಾಗ್ಯಲಕ್ಷ್ಮಿ ಯೋಜನೆಗೆ ಅರ್ಹ ಫಲಾನುಭವಿಗಳು ಲಭ್ಯವಿದ್ದಲ್ಲಿ ಗುರುತಿಸಿ ಸಮೀಪದ ಅಂಗನವಾಡಿ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಿ ನೋಂದಾಯಿಸಲು ಕ್ರಮ ವಹಿಸುವುದು.



- ಈ ಕುಟುಂಬಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಗಳಲ್ಲಿ ಸೌಲಭ್ಯ ನೀಡಲು ಆದ್ಯತೆ ನೀಡುವುದು.

- ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

5. **<u>ಆರೋಗ್ಯ ಇಲಾಖೆ:–</u>**

- ಗರ್ಭಿಣಿಯರನ್ನು ನೋಂದಾಯಿಸುವಾಗಲೇ ಹೆಣ್ಣು ಮಗು ಜನಿಸಿದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಮಾಹಿತಿ ನೀಡುವುದು.
- ಜನನಿ ಸುರಕ್ಷ ಹಾಗೂ ಇತರೆ ಯೋಜನೆಯಡಿ ಸೌಲಭ್ಯ ನೀಡುವ ಎಲ್ಲಾ ಅರ್ಹ ಫಲಾನುಭವಿಗಳನ್ನು ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯ ಪಡೆಯಲು ಪ್ರೇರೆಪಿಸುವುದು.
- ಹೆಣ್ಣು ಮಗುವಿನ ಚುಚ್ಚುಮದ್ದಿನ ಬಗ್ಗೆ ಹಾಗೂ ಜನನದಿಂದ 18 ವರ್ಷಗಳ ವರೆಗೆ ಮಗುವಿನ ಆರೋಗ್ಯದ ಬಗ್ಗೆ ಉಸ್ತುವಾರಿ ಮಾಡುವುದು.
- ಭಾಗ್ಯಲಕ್ಷ್ಮಿ ಫಲಾನುಭವಿ ಮತ್ತು ಫಲಾನುಭವಿಯ ತಂದೆ–ತಾಯಿಯರಿಗೆ ಆರೋಗ್ಯ ವಿಮೆ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವುದು.

6. **<u>ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ</u>**

- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಸಕಾಲದಲ್ಲಿ ಗುರುತಿಸಿ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿಯನ್ನು ಶೀಘ್ರವಾಗಿ ವಿತರಿಸಲು ಕ್ರಮ ಕೈಗೊಳ್ಳುವುದು.
- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಅರ್ಹ ಪೋಷಕರಿಗೆ ನಿಗಧಿತ ಸಮಯದಲ್ಲಿ ನಾಶವಾಗದಂತಹ (ಖಿಚಿಟಿಜಿಜ ಔಡಜಿ) ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿಯನ್ನು ವಿತರಿಸುವುದು.

7. **<u>ಆರ್ಥಿಕ ಇಲಾಖೆ:–</u>**

- ಫಲಾನುಭವಿಗಳನ್ನು ದಾಖಲಿಸುವ ಆಧಾರದ ಮೇಲೆ ಕಾಲಕಾಲಕ್ಕೆ ಹಣವನ್ನು ಒದಗಿಸಬೇಕು.
- ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಮರ್ಥ ಪಾಲುದಾರ ಹಣಕಾಸು ಸಂಸ್ಥೆಯನ್ನು ಗುರುತಿಸಲು ಸಹಾಯ ಮಾಡುವುದು.
- ಪಾಲುದಾರ ಹಣಕಾಸು ಸಂಸ್ಥೆಯ ಕಾರ್ಯವನ್ನು ನಿಯತಕಾಲಿಕವಾಗಿ ಪರಿಶೀಲನೆಗೆ ಒಳಪಡಿಸುವುದು ಹಾಗೂ ಇಟ್ಟಿರುವ ಠೇವಣಿಯ ಹಣದ ಗರಿಷ್ಠತೆ ಹಾಗೂ ಸುರಕ್ಷತೆಯನ್ನು ಹೊಂದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಆಡಳಿತಾತ್ಮಕ ವೆಚ್ಚಗಳಿಗಾಗಿ ನೀಡಿದ ಹಣದ ಖರ್ಚು ವೆಚ್ಚದ ಬಗ್ಗೆ ಲೆಕ್ಕ ತಪಾಸಣೆ ನಡೆಸುವುದು.

8. **<u>ಇ–ಆಡಳಿತ/ಎನ್‌ಐಸಿ:–</u>**

- ಗಣಕೀಕರಣ ವ್ಯವಸ್ಥೆಯನ್ನು ಕಾಲಕಾಲಕ್ಕೆ ಲೆಕ್ಕ ತಪಾಸಣೆಗೆ ಒಳಪಡಿಸಿ ಯೋಜನೆಯ ಅನುಷ್ಠಾನದಲ್ಲಿ ಸಮಸ್ಯೆಗಳು ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಟಾನದಲ್ಲಿ ಜವಾಬ್ದಾರಿವಹಿಸಿಕೊಳ್ಳುತ್ತಿರುವ ಪ್ರತಿ ಇಲಾಖೆಗೂ ಯೋಜನೆಯಡಿ ಸಂಬಂಧಪಟ್ಟ ಇಲಾಖೆ ನಿರ್ವಹಿಸಬೇಕಾಗಿರುವ ಪಾತ್ರ ಮತ್ತು ಜವಬ್ದಾರಿಯನ್ನು ಗಣನೆಗೆ ತೆಗೆದುಕೊಂಡು ಅದಕ್ಕಾನುಗುಣವಾಗಿ ಹೂಡುವಳಿ, ವರದಿ ನಮೂನೆಗಳ ಮತ್ತು ದತ್ತಾಂಶಗಳ ವಿನ್ಯಾಸ ರೂಪಿಸಬೇಕು.



- ಹೋಬಳಿ ಕೇಂದ್ರಗಳಲ್ಲಿ ಸ್ಥಾಪಿಸಲಾಗುವ ನೆಮ್ಮದಿ ಕೇಂದ್ರಗಳ ಮುಖಾಂತರ ವಿವಿಧ ಗ್ರಾಮಗಳಲ್ಲಿನ ಫಲಾನುಭವಿ ತಂದೆ–ತಾಯಿಯರ ಮಾಹಿತಿಯನ್ನು ಪಡೆಯಲು ಸಹಾಯ ಮಾಡುವುದು ಮತ್ತು ಸದರಿ

ಮಾಹಿತಿಗಳನ್ನು ಸಂಬಂಧಿಸಿದ ಇಲಾಖೆಗಳ ಕೇಂದ್ರೀಕೃತ ಮಾಹಿತಿ ಕೇಂದ್ರಗಳಿಗೆ ವರ್ಗಾಹಿಸಲು ವ್ಯವಸ್ಥೆ ಮಾಡುವುದು.

- ಯೋಜನೆಯ ಬಗ್ಗೆ ಉಪ ನಿರ್ದೇಶಕರು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಕ್ತ ತರಬೇತಿ ನೀಡುವುದು.

9. **ಶಿಕ್ಷಣ ಇಲಾಖೆ:-**

- ಫಲಾನುಭವಿ ಮಗು ಶಾಲೆಗೆ ದಾಖಲಾಗಿರುವ ಬಗ್ಗೆ ಶಾಲಾ ದಾಖಲಾತಿ ಸಂಖ್ಯೆ (ಹೆಜ್ಜೆ ಗುರುತು ಸಂಖ್ಯೆ)ಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಒದಗಿಸುವುದು ಹಾಗೂ ಚೈಲ್ಡ್ ಟ್ರ್ಯಾಕಿಂಗ್‌ಗೆ ಸಹಕರಿಸುವುದು.
- ಫಲಾನುಭವಿ ಮಗು 5ನೇ ತರಗತಿ 8ನೇ ತರಗತಿ ಹಾಗೂ 10ನೇ ತರಗತಿ ಉತ್ತೀರ್ಣರಾಗಿರುವ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಮಾಹಿತಿ ನೀಡುವುದು.
- ಯಾವುದೇ ಹಂತದಲ್ಲಿ ಮಗು ಶಾಲೆಯಿಂದ ಹೊರಗುಳಿದಲ್ಲಿ ಸದರಿ ಮಾಹಿತಿಯನ್ನು ಕೂಡಲೇ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಗಮನಕ್ಕೆ ತರುವುದು ಹಾಗೂ ಮಗುವನ್ನು ಶಾಲೆಗೆ ಮರುದಾಖಲಿಸಲು ಕ್ರಮಕೈಗೊಳ್ಳುವುದು.

10. **ವಾರ್ತಾ ಮತ್ತು ಪ್ರಚಾರ ಇಲಾಖೆ:-**

- ಭಾಗ್ಯಲಕ್ಷ್ಮಿ ಯೋಜನೆಯ ಬಗ್ಗೆ ವಿವಿಧ ಮಾಧ್ಯಮಗಳಲ್ಲಿ ಪ್ರಚಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

11. **ಪಾಲುದಾರ ಹಣಕಾಸು ಸಂಸ್ಥೆ:-**

- ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಇಲಾಖೆಯಿಂದ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ನಿರ್ಧಿಷ್ಠ ಸಮಯದಲ್ಲಿ ಬಾಂಡ್‌ಗಳನ್ನು ಮುದ್ರಿಸಿ ಜಿಲ್ಲಾ ಉಪ ನಿರ್ದೇಶಕರಿಗೆ ನೀಡುವುದು.
- ಅನುದಾನ ಮತ್ತು ಫಲಾನುಭವಿಯ ಮಾಹಿತಿ ಸ್ವೀಕೃತಿಯಾದ ಗರಿಷ್ಠ 30 ದಿನಗಳಲ್ಲಿ ಬಾಂಡ್‌ಗಳನ್ನು ಮುದ್ರಿಸಿ ವಿತರಿಸುವುದು.
- ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಉಪಯುಕ್ತತಾ ಪ್ರಮಾಣ ಪತ್ರವನ್ನು ಸೂಕ್ತ ಸಮಯದಲ್ಲಿ ನಿರ್ದೇಶಕರಿಗೆ ಸಲ್ಲಿಸುವುದು.
- ಬಾಂಡ್ ಮುದ್ರಣದಲ್ಲಿ ಯಾವುದೇ ಲೋಪದೋಷಗಳಿರದಂತೆ ಎಚ್ಚರ ವಹಿಸುವುದು.
- ಮರಣ ಹೊಂದಿದ ಫಲಾನುಭವಿಗಳ ಪ್ರಸ್ತಾವನೆಗಳು ಜಿಲ್ಲೆಯಿಂದ ಪಾಲುದಾರ ಹಣಕಾಸು ಸಂಸ್ಥೆಗೆ ಸ್ವೀಕೃತವಾದ 30 ದಿನಗಳೊಳಗೆ ಸದರಿ ಮೊತ್ತವನ್ನು ಸರ್ಕಾರಕ್ಕೆ ಜಮಾಮಾಡುವುದು.
- ಮಧ್ಯಂತರ ಸೌಲಭ್ಯಕ್ಕಾಗಿ ಸ್ವೀಕೃತವಾದ ಪ್ರಸ್ತಾವನೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದು.
- ಪರಿಪಕ್ವ ಮೊತ್ತ ಪಡೆಯಲು ಅರ್ಹರಾಗಿರುವ ಫಲಾನುಭವಿಗಳು ಸಲ್ಲಿಸುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಪರಿಪಕ್ವ ಮೊತ್ತವನ್ನು ಫಲಾನುಭವಿಗಳಿಗೆ ಸಕಾಲದಲ್ಲಿ ನೀಡುವುದು.
- ಯಾವುದೇ ಕಾರಣದಿಂದ ಬಾಂಡ್‌ಗಳನ್ನು ರದ್ದುಪಡಿಸುವಂತೆ ಹಿಂದಿರುಗಿಸಿದ ಸಂದರ್ಭದಲ್ಲಿ ಈ ಬಾಂಡ್‌ಗಳಿಗೆ ಹೂಡಿರುವ ಮೊತ್ತವನ್ನು 30ದಿನಗಳೊಳಗೆ ಸರ್ಕಾರಕ್ಕೆ ಜಮೆ ಮಾಡುವುದು.



12. **ಮಹಾಲೇಖಪಾಲರು:-**

- ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಲೆಕ್ಕ ತಪಾಸಣೆ ಕೈಗೊಳ್ಳುವುದು.

**ಘಿಖಖಖ. <u>ಇತರೆ ಆಡಳಿತಾತ್ಮಕ ಕ್ರಮಗಳು:</u>**

1. ಫಲಾನುಭವಿಯನ್ನು ಗುರುತಿಸಿ ನೋಂದಾಯಿಸಿಕೊಳ್ಳುವ ಹಾಗೂ ಪ್ರಗತಿ ಪರಿಶೀಲನೆ ಮಾಡುವ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ.25/-ಗಳ ಪ್ರೋತ್ಸಾಹ ಧನ ನೀಡಲಾಗುವುದು.
2. ಯೋಜನೆ ಅನುಷ್ಠಾನದ ಆಡಳಿತಾತ್ಮಕ ಹೊಣೆಯಲ್ಲಿ ಫಲಾನುಭವಿಗಳ ದಾಖಲೆಗಳನ್ನು ನಿರ್ವಹಿಸಿ ಸಂರಕ್ಷಿಸುವ ಕಾರ್ಯವನ್ನು ನಿಯಾಮಾನುಸಾರ ಆಯ್ಕೆ ಮಾಡುವ ಬಾಹ್ಯಮೂಲ ಸಂಸ್ಥೆಗೆ ನೀಡಬಹುದಾಗಿದ್ದು, ಭಾಗಶಃ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶನಾಲಯ ಹಾಗೂ ಸಚಿವಾಲಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯದಾಗಿರುವುದರಿಂದ ಇದಕ್ಕಾಗಿ ಪ್ರತ್ಯೇಕವಾಗಿ ಶೇ.2 ರಷ್ಟು ಅಥವಾ ರೂ.4.00 ಕೋಟಿ ಯಾವುದು ಕಡಿಮೆಯೋ ಅದನ್ನು ಆಡಳಿತಾತ್ಮಕ ವೆಚ್ಚಗಳಿಗಾಗಿ ಹಂಚಿಕೆ ಮಾಡಲಾಗುವುದು.
3. ಈ ಯೋಜನೆಯನ್ವಯ ಫಲಾನುಭವಿಗಳ ಪ್ರಾರಂಭಿಕ ನೋಂದಣಿ, ಶಾಲೆಗೆ ಕ್ರಮವಾಗಿ ಹಾಜರಾಗುವಿಕೆ ಹಾಗೂ 8ನೇ ತರಗತಿಯ ವ್ಯಾಸಂಗ ಪೂರ್ಣಗೊಳಿಸುವಿಕೆಯ ಉಸ್ತುವಾರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಿರ್ವಹಿಸತಕ್ಕದ್ದು ಹಾಗೂ ಕೇಂದ್ರ ಸರ್ಕಾರದ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾರ್ಗಸೂಚಿಯ ಮಾನದಂಡಗಳನ್ವಯ ಫಲಾನುಭವಿಗಳ ದಾಖಲೆಗಳನ್ನು ನಿರ್ವಹಿಸಿ, ಸಂರಕ್ಷಿಸಿ, ಪೂರೈಸುವಂತಹ ಬಾಹ್ಯ ಸಂಸ್ಥೆಯನ್ನು ನಿಯಮಾನುಸಾರ ಆಯ್ಕೆ ಮಾಡಬಹುದಾಗಿದ್ದು, ಫಲಾನುಭವಿಗಳ ಹೆಸರಿನಲ್ಲಿ ಠೇವಣಿಯನ್ನು ಇರಿಸಿ, 18 ವರ್ಷಗಳ ನಂತರ ಫಲಾನುಭವಿಗಳಿಗೆ ಪಕ್ವವಾಗುವ ಮೊತ್ತವನ್ನು ದೊರಕಿಸಿಕೊಡುವ ಹಣಕಾಸು ಸಂಸ್ಥೆಯನ್ನು ಸಹ ನಿಯಮಾನುಸಾರ ಆಯ್ಕೆ ಮಾಡಿ ಮೇಲೆ ತಿಳಿಸಿರುವ ಇಲಾಖೆಗಳ ಸಹಕಾರದೊಂದಿಗೆ ಅನುಷ್ಠಾನಗೊಳಿಸುವುದು.
4. ಅರ್ಹ ಫಲಾನುಭವಿಗಳ ನೋಂದಣಿಯ ಆಧಾರದ ಮೇಲೆ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.
5. ಈ ಯೋಜನೆಯಡಿ ನಿಶ್ಚಿತ ಠೇವಣಿ ಹೂಡಲು, ಅರ್ಜಿ ನಮೂನೆ, ಮುಚ್ಚಳಿಕೆ ಪ್ರಮಾಣ ಪತ್ರ, ಮೇಲ್ವಿಚಾರಕಿಯ ದೃಢೀಕರಣ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಶಿಫಾರಸ್ಸು ಮತ್ತು ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ ಇವರ ನಡವಳಿ (ಮಂಜೂರಾತಿ ಆದೇಶ) ಅಗತ್ಯವಾಗಿದೆ.
6. ಮಕ್ಕಳನ್ನು ದತ್ತು ಪಡೆದಿರುವ ಕುಟುಂಬಗಳು ಬಿ.ಪಿ.ಎಲ್. ಕಾರ್ಡುದಾರರಾಗಿದ್ದು, ಯೋಜನೆಗೆ ಅರ್ಹರಾಗಿದ್ದಲ್ಲಿ, ಸದರಿ ಮಕ್ಕಳನ್ನು ಶಾಲೆಗೆ ಸೇರಿಸಲು ಮತ್ತು ಮಗುವಿಗೆ ಪರಿಪಕ್ವ ಮೊತ್ತವನ್ನು ಪಡೆಯಲು ಅನುಕೂಲವಾಗುವಂತೆ ಭಾಗ್ಯಲಕ್ಷ್ಮಿ ಬಾಂಡಿನಲ್ಲಿ ಮೂಲ ಪೋಷಕರ ಹೆಸರುಗಳ ಬದಲಾಗಿ ದತ್ತು ಪೋಷಕರ ಹೆಸರುಗಳನ್ನು ಅಳವಡಿಸಿ ಬದಲಾವಣೆ ಮಾಡಬಹುದಾಗಿದೆ.
7. ಹಣಕಾಸು ಸಂಸ್ಥೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡಿಕೊಂಡು ವರದಿಯನ್ನು ಸಲ್ಲಿಸುವುದು. ಬಾಂಡ್ ವಿತರಣೆಯಾಗದ ಎಲ್ಲಾ ಮೊತ್ತವು ಸರ್ಕಾರಕ್ಕೆ ಪ್ರಾಪ್ತವಾಗುವುದು.



8. ಈ ಯೋಜನೆಯ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-102-0-25-100(ಜನರಲ್), 2235-02-102-0-25-422(ಎಸ್‌ಇಪಿ), 2235-02-102-0-25-423 (ಟಿಎಸ್‌ಪಿ) ಇದರಡಿ ಭರಿಸತಕ್ಕದ್ದು.

9. ಅರ್ಜಿ ನಮೂನೆ ಮತ್ತು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳ ನಮೂನೆಗಳ ಮಾದರಿಗಳನ್ನು 1 ರಿಂದ 8 ರಲ್ಲಿ ಹಾಗೂ ಫ್ಲೋ ಚಾರ್ಟ್ ಹಾಗೂ ಆರೋಗ್ಯವಿಮೆ, ಮತ್ತು ಪೋಷಕರ ಮರಣ ವಿಮೆ ಪಡೆಯುವ ವಿಧಾನವನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1 ರಿಂದ 3 ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

06.3.2015
(ಸರಸಾ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ **ಸಂಖ್ಯೆ:5329, ಬೆಂಗಳೂರು-560 001.**

2.ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

3. ನಿರ್ದೇಶಕರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

4.ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.

5.ಖಜಾನೆ ಉಪನಿರ್ದೇಶಕರು, ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.

6.ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ } (ನಿರ್ದೇಶಕರ

7.ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು. } ಮುಖಾಂತರ)

8.ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ-1

### ಫ್ಲೋ ಚಾರ್ಟ್

### ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಫಲಾನುಭವಿಗಳನ್ನು ಗುರುತಿಸಿ ಆರ್ಥಿಕ ಸಂಸ್ಥೆಯಲ್ಲಿ ಠೇವಣಿ ಇಡಲು ನಿಗಧಿಸಿರುವ ಕಾಲಾವಕಾಶ

| ಕ್ರ.ಸಂ | ವಿವರ | ಕಾಲಾವಕಾಶ |
|---|---|---|

| | | |
|---|---|---|
| 1 | ಅಂಗನವಾಡಿ ಕಾರ್ಯಕರ್ತೆ ಹೆಣ್ಣು ಮಗುವನ್ನು ಗುರುತಿಸಿ ತಂದೆ/ತಾಯಿಯಿಂದ ಅರ್ಜಿಯನ್ನು ಜನನ ಪ್ರಮಾಣ ಪತ್ರದೊಂದಿಗೆ ಸ್ವೀಕರಿಸಿ, ದಾಖಲೆಗಳನ್ನು ಪರಿಶೀಲಿಸಿ, ಮೇಲ್ವಿಚಾರಕಿಗೆ ಸಲ್ಲಿಸಲು | 6 ತಿಂಗಳು |
| 2 | ಮೇಲ್ವಿಚಾರಕಿ ಅರ್ಜಿಗಳನ್ನು ಪರಿಶೀಲಿಸಿ ತಂತ್ರಾಂಶದಲ್ಲಿ ನೊಂದಣಿ ಮಾಡಿ ಬಾಂಡ್ ಐಡಿ ಸಂಖ್ಯೆ ಪಡೆಯುವುದು. | 2 ತಿಂಗಳು |
| 3 | ಶಿಶು ಅಭಿವೃದ್ಧಿ ಯೋಜನಾಧಿಕಾರಿ ದಾಖಲೆಗಳನ್ನು ಪರಿಶೀಲಿಸಿ, ಉಪ ನಿರ್ದೇಶಕರಿಗೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲು ಹಾಗೂ ಆನ್‌ಲೈನ್ ಮಂಜೂರಾತಿ ನೀಡಲು | 15 ದಿನ |
| 4 | ಉಪ ನಿರ್ದೇಶಕರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಸ್ವೀಕರಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಆನ್‌ಲೈನ್ ಮೂಲಕ ಮಂಜೂರಾತಿ ನೀಡುವುದು. | 15 ದಿನ |
| 5 | ನಿರ್ದೇಶಕರು ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಅನುಸಾರವಾಗಿ ಅನುಮೋದಿಸಿ ಪಾಲುದಾರ ಹಣಕಾಸು ಸಂಸ್ಥೆಗೆ ಕಳುಹಿಸುವುದು. | – |
| 6 | ಪಾಲುದಾರ ಹಣಕಾಸು ಸಂಸ್ಥೆಯು ನಿರ್ದೇಶನಾಲಯದಿಂದ ಅನುದಾನ ಮತ್ತು ಮಾಹಿತಿ ಸ್ವೀಕೃತವಾದ ಒಂದು ತಿಂಗಳಲ್ಲಿ ಬಾಂಡ್‌ಗಳನ್ನು ಮುದ್ರಿಸಿ ಜಿಲ್ಲೆಗಳಿಗೆ ವಿತರಿಸುವುದು. | 30 ದಿನ |

**(ಸರಸಾ)**
ಸರ್ಕಾರದ ಅಧೀನ ಕಾರ್ಯದರ್ಶಿ–1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

## <u>ಅನುಬಂಧ–2</u>

**<u>ಆರೋಗ್ಯ ವಿಮೆ ಪಡೆಯುವ ವಿಧಾನ</u>**

- 01.04.2006ರಿಂದ 31.07.2008ರ ವರೆಗೆ ಜನಿಸಿ ಯೋಜನೆಯಡಿ ನೊಂದಣಿಯಾದ ಮಕ್ಕಳಿಗೆ ಆರೋಗ್ಯವಿಮೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಆರೋಗ್ಯ ವಿಮೆ ಸೌಲಭ್ಯ ಪಡೆಯಲು ಮಗು ಕನಿಷ್ಠ 24 ಗಂಟೆ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿರಬೇಕು.
- ನಿಗಧಿತ ನಮೂನೆಯ ಅರ್ಜಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಿಂದ ಪಡೆಯಬೇಕು
- ಭಾಗ್ಯಲಕ್ಷ್ಮಿ ಬಾಂಡ್‌ನ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.
- ಚಿಕಿತ್ಸೆ ಪಡೆದ ಬಗ್ಗೆ ಆಸ್ಪತ್ರೆಯ ಮೂಲ ಬಿಲ್ಲು ಹಾಗೂ ರಶೀದಿಯನ್ನು ಲಗತ್ತಿಸಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ ಬಗ್ಗೆ ಡಿಸ್ಚಾರ್ಜ್ ಸಮ್ಮರಿ ಲಗತ್ತಿಸಬೇಕು.

  ಮೇಲಿನ ಎಲ್ಲಾ ದಾಖಲಾತಿಗಳೊಂದಿಗೆ ಅರ್ಜಿಯನ್ನು ಚಿಕಿತ್ಸೆ ಪಡೆದ ನಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸಬೇಕು. ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿ ಭಾರತೀಯ ಜೀವ ವಿಮಾ ನಿಗಮಕ್ಕೆ ಕಳುಹಿಸಿಕೊಡಬೇಕು. ದಿನಾಂಕ01.08.2008ರಿಂದ ಜನಿಸಿ ಬಾಂಡ್ ಪಡೆದ ಫಲಾನುಭವಿಗಳಿಗೆ ವಿದ್ಯಾರ್ಥಿವೇತನ ಮತ್ತು ಆರೋಗ್ಯ ವಿಮೆ ಸೌಲಭ್ಯವಿರುವುದಿಲ್ಲ.

**(ಸರಸಾ)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

## ಅನುಬಂಧ-3

**ಪೋಷಕರ ವಿಮೆ ಸೌಲಭ್ಯವನ್ನು ಪಡೆಯಲು ಅರ್ಜಿ ಸಲ್ಲಿಸುವ ವಿಧಾನ**

1. ವಿಮಾದಾರ ಪೋಷಕರು ಮರಣ ಹೊಂದಿದಾಗ ಮಾತ್ರ ವಿಮೆ ಸೌಲಭ್ಯಕ್ಕೆ ಅವಕಾಶವಿರುತ್ತದೆ.
2. ವಿಮೆ ಸೌಲಭ್ಯ ಪಡೆಯಲು ಅರ್ಜಿ ನಮೂನೆಯನ್ನು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನೆಗಳಿಂದ ಪಡೆಯಬೇಕು.

3. ಅರ್ಜಿಯ ಜೊತೆಗೆ ಈ ಕೆಳಗಿನ ದಾಖಲಾತಿಗಳನ್ನು ಲಗತ್ತಿಸಬೇಕು

- ಮರಣ ದೃಢೀಕರಣದ ಮೂಲ ಪ್ರತಿ ಮತ್ತು ಜೆರಾಕ್ಸ್ ಪ್ರತಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
- ಮೂಲ ಬಾಂಡ್‌ನಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿತವಾಗಿರುವ ಭಾಗವನ್ನು ಕತ್ತರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು.
- ವಯಸ್ಸಿನ ದೃಢೀಕರಣಕ್ಕಾಗಿ-ಶಾಲಾ ಪ್ರಮಾಣ ಪತ್ರ(ಟಿ.ಸಿ/ಮಾರ್ಕ್ಸ್ ಕಾರ್ಡ್)ಮತದಾರರ ಗುರುತಿನ ಚೀಟಿ/ಪಟ್ಟಿ, ಪಡಿತರ ಚೀಟಿ ಒದಗಿಸಬೇಕು.
- ಮಗು ತಾಯಿ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಜಂಟಿ ಖಾತೆ ತೆರೆದು, ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.
- ಘಟನೆ ನಡೆದ ನಂತರ ಸಕಾಲದಲ್ಲಿ ಮೇಲಿನ ಎಲ್ಲಾ ದಾಖಲಾತಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ ಭಾರತೀಯ ಜೀವ ವಿಮಾ ನಿಗಮಕ್ಕೆ ತಲುಪಿಸಬೇಕು.

ಅಪಘಾತದಲ್ಲಿ ಮರಣ ಹೊಂದಿದ ಸಂದರ್ಭದಲ್ಲಿ ಮೇಲಿನ ಎಲ್ಲಾ ದಾಖಲಾತಿಗಳ ಜೊತೆ ಈ ಕೆಳಗಿನ ದಾಖಲಾತಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಂದ ದೃಢೀಕರಿಸಿ ಒದಗಿಸಬೇಕು

- ಪ್ರಥಮ ಮಾಹಿತಿ ವರದಿ(ಎಫ್‌ಐಆರ್)
- ಪೋಲೀಸ್ ಇನಕ್ವೆಸ್ಟ್ ರಿಪೋರ್ಟ್(ಪಿಐಆರ್)
- ಪೋಸ್ಟ್ ಮಾರ್ಟಮ್ ರಿಪೋರ್ಟ್(ಪಿಎಂಆರ್)

ವಿಮಾದಾರ ಪೋಷಕರ ಅಪಘಾತ/ಮರಣಕ್ಕೆ ಸಂಬಂಧಿಸಿದಂತೆ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದ್ದರೆ ಕೇಸ್ ನಂಬರ್ ನಮೂದಿಸಿ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಇಂತಹ ಸಂದರ್ಭದಲ್ಲಿ ಪ್ರಥಮ ಹಂತದಲ್ಲಿ ಸಹಜ ಮರಣಕ್ಕೆ ನೀಡುವ ವಿಮಾ ಮೊತ್ತವನ್ನು ನೀಡಲಾಗುತ್ತದೆ. ಕೋರ್ಟ್ ಕೇಸ್ ಇತ್ಯರ್ಥಗೊಂಡ ನಂತರ ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ ಭಾರತೀಯ ಜೀವ ವಿಮಾ ನಿಗಮಕ್ಕೆ ಕಳುಹಿಸಿ ಪೂರ್ಣ ವಿಮಾ ಮೊತ್ತವನ್ನು ನಾಮಿನಿಯು ಪಡೆಯಬಹುದಾಗಿದೆ.

**(ಸರಸಾ)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

<u>**ನಮೂನೆ-1**</u>

**ಭಾಗ್ಯಲಕ್ಷ್ಮಿ ಯೋಜನೆ ನೊಂದಾವಣಿ ಅರ್ಜಿ**

| ಪೋಷಕರೊಂದಿಗೆ ಮಗುವಿನ ಭಾವಚಿತ್ರ |
|---|

**ಈ ಅರ್ಜಿಯನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತದೆ.**

| | | |
|---|---|---|
| 1 | ಮಗುವಿನ ಹೆಸರು (ಅವಳಿ ಮಗುವಾಗಿದ್ದಲ್ಲಿ ಮೊದಲನೇ ಅವಳಿ/ಎರಡನೇ ಅವಳಿ ಮಗು ಎಂದು ನಮೂದಿಸುವುದು) | |
| 2 | ಜನನ ಪ್ರಮಾಣ ಪತ್ರದಂತೆ ಜನ್ಮ ದಿನಾಂಕ (ಮಹಾನಗರ/ ನಗರಸಭೆ/ ಪುರಸಭೆ/ಗ್ರಾಮ ಲೆಕ್ಕಿಗರಿಂದ ಪಡೆದಿರಬೇಕು) | |
| 3 | ತಾಯಿಯ ಹೆಸರು | |
| 4 | ತಂದೆಯ ಹೆಸರು | |
| 5 | ವಿಳಾಸ | |
| 6 | (ಅ) ತಾಯಿಯ ಉದ್ಯೋಗ<br>(ಆ) ತಂದೆಯ ಉದ್ಯೋಗ | |
| 7 | (ಅ) ಕುಟುಂಬದಲ್ಲಿರುವ ಮಕ್ಕಳ ಸಂಖ್ಯೆ | |
| | (ಆ) ಈಗ ಸೌಲಭ್ಯ ಪಡೆಯುತ್ತಿರುವ ಹೆಣ್ಣು ಮಗು ಕುಟುಂಬದಲ್ಲಿ<br>ಎಷ್ಟನೆಯದು? | |
| | (ಇ) ಸೌಲಭ್ಯಕ್ಕೆ ಎಷ್ಟನೆಯದು? | |
| 8 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಅಲ್ಪ ಸಂಖ್ಯಾತರು ಆಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಸಲ್ಲಿಸುವುದು. | |
| 9 | ಬಡತನ ರೇಖೆಗಿಂತ ಕೆಳಗಿನ ಕುಟುಂಬದ (ಬಿಪಿಎಲ್) ಪಡಿತರ ಚೀಟಿ/ಆದ್ಯತಾ ಕುಟುಂಬ ಪಡಿತರ ಚೀಟಿಯ ಪ್ರತಿಯನ್ನು ಲಗತ್ತಿಸುವುದು | |
| 10 | ಆದ್ಯತೆಯ ಮೇರೆಗೆ ಮಗುವಿನ ಆಧಾರ್ ಗುರುತಿನ ಚೀಟಿ ಸಂಖ್ಯೆ / ವಾಸಸ್ಥಳ ದೃಢೀಕರಣ ಪತ್ರ | |

ನಾನು ಮೇಲೆ ನೀಡಿರುವ ಮಾಹಿತಿಯ ಸತ್ಯವಾಗಿದೆಯೆಂದು ಇದರಲ್ಲಿ ಏನೇ ಲೋಪ ಕಂಡುಬಂದಲ್ಲಿ ಇಲಾಖೆಯು ಕೈಗೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆಂದು ದೃಢೀಕರಿಸುತ್ತೇನೆ.

ಸ್ಥಳ: ಅರ್ಜಿದಾರರ ಸಹಿ

ದಿನಾಂಕ:

(ಮಗುವಿನ ತಾಯಿ/ತಂದೆ/ಪೋಷಕರು)

ಸೂಚನೆ:-

- ಹೆಣ್ಣು ಮಗು 01.08.2008ರ ನಂತರ ಜನಿಸಿರಬೇಕು. * ಮಗುವಿನ ಹೆಸರು ನಮೂದಿಸುವುದು ಕಡ್ಡಾಯವಾಗಿರುತ್ತದೆ.
- ಪೋಷಕರು ಮಗು ಹುಟ್ಟಿದ 6 ತಿಂಗಳೊಳಗೆ ಮಗುವಿನ ಜನನ ಪ್ರಮಾಣ ಪತ್ರದೊಂದಿಗೆ ಅಂಗನವಾಡಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಿರಬೇಕು.
- ಮಗುವಿನ ಹೆಸರನ್ನು ಅರ್ಜಿಯಲ್ಲಿ ನಮೂದಿಸಿರುವಂತೆ ಅರ್ಜಿಯೊಂದಿಗೆ ಸಲ್ಲಿಸುವ ಇನ್ನಿತರೆ ದಾಖಲೆಗಳಲ್ಲಿ ನಮೂದಾಗಿರಬೇಕು.
- ಸೌಲಭ್ಯ ಪಡೆಯಲು ಬಾಂಡ್ ಒದಗಿಸುವುದು ಕಡ್ಡಾಯವಾಗಿದ್ದು, ಯಾವುದೇ ಕಾರಣಕ್ಕೂ ಬಾಂಡ್‌ನ್ನು ಕಳೆಯದಂತೆ ಎಚ್ಚರಿಕೆವಹಿಸುವುದು.

<u>**ಸ್ವೀಕೃತಿ**</u>

**ಶ್ರೀಮತಿ_______________ ಕೋಂ_________________ ಇವರ ಮಗಳು ಕುಮಾರಿ__________________ರವರ ಭಾಗ್ಯಲಕ್ಷ್ಮಿ ಯೋಜನೆಯ ಅರ್ಜಿಯನ್ನು ದಿನಾಂಕ_______________ ರಂದು ಸ್ವೀಕರಿಸಲಾಗಿದೆ.**

**ಸ್ಥಳ: ______________ ಅಂಗನವಾಡಿ ಕಾರ್ಯಕರ್ತೆಯ ಹೆಸರು, ಸಹಿ________________**
**ದಿನಾಂಕ: ____________ ಅಂಗನವಾಡಿ ಕೇಂದ್ರ/ವೃತ್ತದ ಹೆಸರು____________________**
**ತಾಲ್ಲೂಕು/ಜಿಲ್ಲೆಯ ಹೆಸರು___________________________**

## ನಮೂನೆ-2

ಮುಚ್ಚಳಿಕೆ ಪ್ರಮಾಣ ಪತ್ರ
ಭಾಗ್ಯಲಕ್ಷ್ಮಿ ಯೋಜನೆಯಡಿ ಸೌಲಭ್ಯ ಪಡೆಯಲು

ಶ್ರೀ________________ ತಂದೆ/ಶ್ರೀಮತಿ________________ ಎಂಬ ಹೆಸರಿನ ತಂದೆ/ತಾಯಿಯಾದ ನಾನು/ನಾವು, ನಮಗೆ ದಿನಾಂಕ__________________ ರಂದು ಹುಟ್ಟಿದ ____________________________(ಮಗುವಿನ ಹೆಸರು) ಮೊದಲನೇ/ಎರಡನೇ ಹೆಣ್ಣು ಮಗುವಾಗಿದ್ದು, ಭಾಗ್ಯಲಕ್ಷ್ಮಿ ಯೋಜನೆಯಡಿ ಸೌಲಭ್ಯ ಪಡೆಯಲು ಸರ್ಕಾರ ವಿಧಿಸಿರುವ ಕೆಳಕಂಡ ಷರತ್ತುಗಳನ್ನು ಒಪ್ಪಿರುತ್ತೇನೆ/ವೆ.

1. ಹೆಣ್ಣು ಮಗುವನ್ನು ಲಿಂಗಬೇಧ ತಾರತಮ್ಯ ಮಾಡದೇ ಸಾಕುತ್ತೇವೆ
2. ಯಾವುದೇ ಕಾರಣಕ್ಕೂ ಹೆಣ್ಣು ಮಗುವನ್ನು ಬಾಲ ಕಾರ್ಮಿಕಳನ್ನಾಗಿ ಮಾಡುವುದಿಲ್ಲ.
3. ಕನಿಷ್ಠ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಕೊಡಿಸುತ್ತೇವೆ.
4. 18ವರ್ಷ ತುಂಬುವವರೆಗೆ ಮದುವೆ ಮಾಡುವುದಿಲ್ಲ.
5. ನನ್ನ ಕುಟುಂಬದಲ್ಲಿ ಯಾವುದೇ ಬಾಲ್ಯವಿವಾಹಕ್ಕೆ ಅವಕಾಶ ನೀಡುವುದಿಲ್ಲ ಹಾಗೂ ಅಂತಹ ಬಾಲ್ಯ ವಿವಾಹದಲ್ಲಿ ಭಾಗಿಯಾಗುವುದಿಲ್ಲ. ತಪ್ಪಿದಲ್ಲಿ, ನೀಡಿರುವ ಸರ್ಕಾರದ ಸವಲತ್ತುಗಳನ್ನು ಹಿಂಪಡೆಯಬಹುದಾಗಿದೆ.

ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಮಂಜೂರು ಮಾಡಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೆಂದು ಒಪ್ಪಿ ಸಹಿ ಮಾಡಿರುತ್ತೇವೆ.

ಸ್ಥಳ: ಪೋಷಕರ ಸಹಿ
ದಿನಾಂಕ:
ಮತ್ತು ಎಡಗೈ ಹೆಬ್ಬೆಟ್ಟಿನ ಗುರುತು

"ಬಾಲ್ಯ ವಿವಾಹವನ್ನು ನಿಷೇಧಿಸಲಾಗಿದೆ
ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ"

## ಸ್ವೀಕೃತಿ

**ಶ್ರೀಮತಿ____________________________ಕೋಂ_________________ ಇವರ ಮಗಳು ಕುಮಾರಿ__________________________ ರವರ ಭಾಗ್ಯಲಕ್ಷ್ಮಿ ಯೋಜನೆಯ ಅರ್ಜಿಯನ್ನು ದಿನಾಂಕ________________ ರಂದು ಅಂಗನವಾಡಿ ಕಾರ್ಯಕರ್ತೆ __________ ಕೇಂದ್ರ ರವರಿಂದ ಸ್ವೀಕರಿಸಲಾಗಿದೆ.**

**ಸ್ಥಳ: ______________ ಮೇಲ್ವಿಚಾರಕಿಯ ಹೆಸರು, ಸಹಿ______________**
**ದಿನಾಂಕ: ____________ ವೃತ್ತದ ಹೆಸರು_________________________**
**ತಾಲ್ಲೂಕು/ಜಿಲ್ಲೆಯ ಹೆಸರು__________________**

# ನಮೂನೆ-3

## ಮೇಲ್ವಿಚಾರಕಿಯ ದೃಢೀಕರಣ

__________________________ ಶಿಶು ಅಭಿವೃದ್ಧಿ ಯೋಜನಾ ಕಛೇರಿಯ ವ್ಯಾಪ್ತಿಯಲ್ಲಿ ಬರುವ ________________________ ವೃತ್ತದ __________________ ಗ್ರಾಮದ ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ವಿಳಾಸ_____________________________________________________ರಲ್ಲಿ ವಾಸಿಸುವ ಶ್ರೀಮತಿ _______________________________ಕೋಂ________________ ಜನ್ಮ ನೀಡಿದ್ದು, ಭಾಗ್ಯಲಕ್ಷ್ಮಿ ಯೋಜನೆಯಡಿ ನಿಶ್ಚಿತ ಠೇವಣಿ 19,300/18,350/-ಕ್ಕೆ ಅರ್ಹರಿರುತ್ತಾರೆ. ಮಗುವಿನ ಜನನ ಪ್ರಮಾಣ ಪತ್ರ ಪರಿಶೀಲಿಸಿ ಲಗತ್ತಿಸಲಾಗಿದೆ. ಮಗುವಿನ ತಂದೆ/ತಾಯಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ಸೇರಿದವರೆಂಬ ಬಗ್ಗೆ ಸಲ್ಲಿಸಿರುವ ಬಿಪಿಎಲ್ ಕಾರ್ಡ್‌ನ ದಾಖಲೆ ಪರಿಶೀಲಿಸಿ ದೃಢೀಕರಿಸಿದೆ.

ಈ ಕುಟುಂಬದಲ್ಲಿ ಒಟ್ಟು ________ ಮಕ್ಕಳಿದ್ದು, ತಾಯಿ ಅಥವಾ ತಂದೆ ಶಾಶ್ವತ ಕುಟುಂಬ ಯೋಜನೆ ಪದ್ಧತಿ ಅಳವಡಿಸಿಕೊಂಡಿರುತ್ತಾರೆ.

ಸ್ಥಳ: ಅಂಗನವಾಡಿ ಕಾರ್ಯಕರ್ತೆ ಸಹಿ ಮೇಲ್ವಿಚಾರಕಿ ಸಹಿ
ದಿನಾಂಕ

ಅಂಗನವಾಡಿ ಕಾರ್ಯಕರ್ತೆಯ ಹೆಸರು ಮೇಲ್ವಿಚಾರಕಿಯ ಹೆಸರು

ಅಂಗನವಾಡಿ ಕೇಂದ್ರದ ಹೆಸರು

ನಗರಸಭೆ/ಮಹಾನಗರ ಪಾಲಿಕೆ ಸಿಬ್ಬಂದಿ ಸಹಿ ವೃತ್ತದ ಹೆಸರು

- ವೃತ್ತದ ಮೇಲ್ವಿಚಾರಕಿಯು ಅಂಗನವಾಡಿ ಕಾರ್ಯಕರ್ತೆಯಿಂದ ಎಲ್ಲಾ ಅವಶ್ಯ ದಾಖಲಾತಿಗಳೊಂದಿಗೆ ಪಡೆದು ಒಂದು ತಿಂಗಳೊಳಗೆ ಕ್ರೋಢೀಕೃತ ಪಟ್ಟಿಯೊಂದಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
- ಅಂಗನವಾಡಿ ವ್ಯಾಪ್ತಿಯಿಂದ ಹೊರಗಿರುವ ಮಹಾನಗರ ಪಾಲಿಕೆ/ನಗರ ಸಭಾ ಪ್ರದೇಶಗಳಲ್ಲಿ ಈ ಕಾರ್ಯವನ್ನು ಮಹಾನಗರ ಪಾಳಿಕೆ ಸಿಬ್ಬಂದಿ/ನಗರ ಸಭೆಗಳಲ್ಲಿ ಸಿಬ್ಬಂದಿಗೆ ವಹಿಸುವುದು.

# <u>ನಮೂನೆ-4</u>

**ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಶಿಫಾರಸ್ಸು**

ಶ್ರೀ______________________ ರವರ ಪತ್ನಿ ಶ್ರೀಮತಿ _______________________ ಇವರು ______________________ ಗ್ರಾಮದ __________________ ಹೋಬಳಿ_______________ ತಾಲ್ಲೂಕಿನಲ್ಲಿ ವಾಸಿಸುತ್ತಿದ್ದು, __________________ ವೃತ್ತದ ಮೇಲ್ವಿಚಾರಕಿ ಶ್ರೀಮತಿ _________________________ ಇವರು ಸಲ್ಲಿಸಿರುವ ಎಲ್ಲಾ ವಿವರಗಳು ಸಮರ್ಪಕವಾಗಿರುತ್ತದೆ. ಆದುದರಿಂದ ರೂ.19,300/18,350/- (ಹತ್ತೊಂಬತ್ತು ಸಾವಿರದ ಮೂರು ನೂರು/ಹದಿನೆಂಟು ಸಾವಿರದ ಮೂರುನೂರು ಐವತ್ತು) ಮಾತ್ರಗಳ ನಿಶ್ಚಿತ ಠೇವಣಿ ಹೂಡಲು ಮಂಜೂರಾತಿಗಾಗಿ ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,________________ ಜಿಲ್ಲೆ ಇವರಿಗೆ ಶಿಫಾರಸ್ಸು ಮಾಡಲಾಗಿದೆ.

ಸ್ಥಳ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಹಿ ಮೊಹರಿನೊಂದಿಗೆ

- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಎಲ್ಲಾ ವೃತ್ತಗಳಿಂದ ಪಡೆದ ಮಾಹಿತಿಯನ್ನು ಪರಿಶೀಲಿಸಿ 15 ದಿನಗಳೊಳಗೆ ಸಂಬಂಧಪಟ್ಟ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸುವುದು.

## ನಮೂನೆ-5

**ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ ಇವರ ನಡವಳಿಗಳು**

_______________ಜಿಲ್ಲೆ _____________ ತಾಲ್ಲೂಕಿನ ___________________ ಹೋಬಳಿಯ ____________________________________________ ವಿಳಾಸದಲ್ಲಿ ವಾಸವಾಗಿರುವ ಶ್ರೀಮತಿ ___________________________ಗಂಡ______________________ ಇವರಿಗೆ ______________ ದಿನಾಂಕದಂದು ಜನಿಸಿದ ಒಂದನೆಯ/ಎರಡನೇ ಹೆಣ್ಣು ಮಗುವಿನ (ಹೆಸರು)________________________ಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ರೂ.19300/18350/-(ಹತ್ತೊಂಬತ್ತು ಸಾವಿರದ ಮೂರು ನೂರು/ಹದಿನೆಂಟು ಸಾವಿರದ ಮೂರುನೂರು ಐವತ್ತು) ಮಾತ್ರಗಳಿಗೆ ಲೆಕ್ಕ ಶೀರ್ಷಿಕೆ 2235-02-102-0-25-100/422/423 ಧನ ಸಹಾಯ/ಪರಿಹಾರ (ಯೋಜನೆ) ಅಡಿಯಲ್ಲಿ 18ವರ್ಷಗಳ ನಿಶ್ಚಿತ ಠೇವಣಿ ಹೂಡಲು ಆದೇಶಿಸಲಾಗಿದೆ.

ಸ್ಥಳ:

ದಿನಾಂಕ:

ಉಪ ನಿರ್ದೇಶಕರು
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಜಿಲ್ಲಾ ಕಛೇರಿ ಇವರ ಸಹಿ ಮೊಹರಿನೊಂದಿಗೆ

**ರೂ.20/-ಗಳ ಛಾಪಾ ಕಾಗದದಲ್ಲಿ**

## ನಮೂನೆ-6

**ಸ್ವಯಂ ಘೋಷಣಾ ವಿವಾಹ ದೃಢೀಕರಣ ಪತ್ರ**

ಹೆಸರು:
ವಯಸ್ಸು:
ವಿಳಾಸ:
ತಾಲ್ಲೂಕು:
ಜಿಲ್ಲೆ:
ರಾಜ್ಯ:
ವಿವಾಹವಾದ ದಿನಾಂಕ:

ಶ್ರೀ______________________________ತಂದೆಯ ಹೆಸರು ______________________________ಮತ್ತು ಶ್ರೀಮತಿ___________________ತಂದೆಯ ಹೆಸರು____________________________ಆದ ನಾವು ದಿನಾಂಕ______________ರಂದು ವಿವಾಹಿತರಾಗಿರುತ್ತೇವೆ ಹಾಗೂ ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದೆ. ಒಂದು ವೇಳೆ ಮೇಲೆ ನೀಡಿರುವ ಮಾಹಿತಿಯು ಅಸತ್ಯವೆಂದು ಕಂಡುಬಂದಲ್ಲಿ ಸೌಲಭ್ಯವನ್ನು ಹಿಂಪಡೆಯಬಹುದಾಗಿದೆ ಹಾಗೂ ಸರ್ಕಾರ ವಿಧಿಸುವ ಶಿಕ್ಷೆಗೆ ಬದ್ಧಳಾಗಿರುತ್ತೇನೆ.

ಸ್ಥಳ: ದಂಪತಿಗಳ ಸಹಿ
ದಿನಾಂಕ:

## ನಮೂನೆ-7

ರೂ.20/-ಗಳ ಛಾಪಾ ಕಾಗದದಲ್ಲಿ

### ಸ್ವಯಂ ಘೋಷಣಾ ಪ್ರಮಾಣ ಪತ್ರ(ಏಕ ಪೋಷಕರಿಗೆ)

ಹೆಸರು:
ವಯಸ್ಸು:
ವಿಳಾಸ:
ತಾಲ್ಲೂಕು:
ಜಿಲ್ಲೆ:
ರಾಜ್ಯ:

ಕುಮಾರಿ/ಶ್ರೀಮತಿ ___________________ ತಂದೆಯ ಹೆಸರು_________________________ ಆದ ನಾನು ಏಕ ಪೋಷಕರು ಎಂದು ಈ ಮೂಲಕ ಘೋಷಿಸುತ್ತೇನೆ. ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದೆ. ಒಂದು ವೇಳೆ ನಾನು ನೀಡಿರುವ ಮಾಹಿತಿಯು ಅಸತ್ಯವೆಂದು ಕಂಡುಬಂದಲ್ಲಿ ಸೌಲಭ್ಯವನ್ನು ಹಿಂಪಡೆಯಬಹುದಾಗಿದೆ. ಹಾಗೂ ಸರ್ಕಾರ ವಿಧಿಸುವ ಶಿಕ್ಷೆಗೆ ಬದ್ಧಳಾಗಿರುತ್ತೇನೆ.

ಸ್ಥಳ: ಸಹಿ_____________
ದಿನಾಂಕ:

## ನಮೂನೆ-8

ರೂ.20/-ಗಳ ಛಾಪಾ ಕಾಗದದಲ್ಲಿ

### ಸ್ವಯಂ ಘೋಷಣಾ ಪ್ರಮಾಣ ಪತ್ರ (ಪರಿತ್ಯಕ್ತೆ)

ಹೆಸರು:
ವಯಸ್ಸು:
ವಿಳಾಸ:
ತಾಲ್ಲೂಕು:
ಜಿಲ್ಲೆ:
ರಾಜ್ಯ:
ವಿವಾಹವಾದ ದಿನಾಂಕ:

ಶ್ರೀಮತಿ___________________ ತಂದೆಯ ಹೆಸರು_________________________ ಆದ ನಾನು ದಿನಾಂಕ_____________ರಂದು ವಿವಾಹವಾಗಿದ್ದು ಈಗ ಪರಿತ್ಯಕ್ತೆಳಾಗಿರುತ್ತೇನೆ. ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದೆ. ಒಂದು ವೇಳೆ ನೀಡಿರುವ ಮಾಹಿತಿಯು ಅಸತ್ಯವೆಂದು ಕಂಡುಬಂದಲ್ಲಿ ಸೌಲಭ್ಯವನ್ನು ಹಿಂಪಡೆಯಬಹುದಾಗಿದೆ. ಹಾಗೂ ಸರ್ಕಾರ ವಿಧಿಸುವ ಶಿಕ್ಷೆಗೆ ಬದ್ಧಳಾಗಿರುತ್ತೇನೆ.

ಸ್ಥಳ: ಸಹಿ_____________
ದಿನಾಂಕ: